ಅಪರಂಜಿ

ಸಂಪುಟ ೬
ಮಾರ್ಚ್ ೧೯೮೯
ಸಂಚಿಕೆ ೬

ತಿಳಿನಗೆಯ ಕಾರಂಜ



- ಆನಂದ್
- ಶ್ರೀನಿವಾಸರ 'ಅರುಣ'ದಿಂದ
- ಜಿ. ಎನ್. ಜಿ.
- ಜೇನಹಳ್ಳಿ ಸಿದ್ಧಲಿಂಗಪ್ಪ
- ರಾ. ಶಿ.
- ಶಾಂತಾ ರಘು
- ಆರ್.ಕೆ. ಲಕ್ಷ್ಮಣ್
- [illegible]
- ಶಿವು

ಬಿಡಿ ಪ್ರತಿ : ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೬ | ಮಾರ್ಚ್ ೧೯೮೯ | ಸಂಚಿಕೆ ೬

ಚಂದಾ ವಿವರ :

ಬಿಡಿ ಪ್ರತಿ :
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 150 ರೂ.
ಪೋಷಕರು : 500 ರೂ.

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ವಿಳಾಸ :
ಅಪರಂಜಿ ಕಾರ್ಯಾಲಯ
119 [ಹಳೆಯ 36]
6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಸಂಪಾದಕ :
ಶಿವಕುಮಾರ್

ಡ್ರೈವಿಂಗ್ ಕಲೀತಾ ಇದ್ಲು ನಮ್ ರೂಪಾ. "ಕಾರಿನ ಎಲ್ಲಾ ಭಾಗಗಳೂ ಚೆನ್ನಾಗಿ ಪರಿಚಯ ಆಯ್ತು ತಾನೆ ?" ಪಕ್ಕದಲ್ಲಿದ್ದ ಶಿಕ್ಷಕ ಕೇಳಿದ.

ಅತೀವ ಉತ್ಸಾಹದಿಂದ ರೂಪಾ ಹೇಳಿದಳು :

"ಆಯ್ತುರೀ. ಆದ್ರೆ ಈ ಮೇಲಿರೋ ಕನ್ನಡೀಲಿ ನನ್ನ ಮುಖಾನೇ ಕಾಣೋಲ್ಲ. ಹೇಗೆ ನೋಡಿದರೂ, ಹಿಂದ ಬರ್ತಿರೋ ಯಾವುದೋ ಕಾರು ಕಾಣುತ್ತೆ ಅಷ್ಟೆ. ಅದನ್ನ ಸ್ವಲ್ಪ ಸರಿಪಡಿಸ್ಬೇಕಲ್ಲಾ".

ಈ ಸಂಚಿಕೆಯಲ್ಲಿ......

ಮುದ್ರಣ : ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು-560003. ದೂರವಾಣಿ : 342144

ಅ ಪ ರಂ ಜಿ

(ತಿಳಿನಗೆಯ ಕಾರಂಜಿ)

ಸಂಪುಟ ೬ ಮಾರ್ಚ್ ೧೯೮೯ ಸಂಚಿಕೆ ೬

ಸ್ವಯಂಭುವು ಇಂದ್ರಿಯಗಳನ್ನು ಹೊರಮುಖವಾಗಿ ಕೊರೆದಿರುವುದರಿಂದ. ಯಾರೂ ತಮ್ಮೊಳಗೆ ನೋಡಿಕೊಳ್ಳಲಾಗುವುದಿಲ್ಲ. ಎಲ್ಲೋ, ಒಬ್ಬ ವಿವೇಕಿಯು ಕಣ್ಣನ್ನು ಒಳಕ್ಕೆ ತಿರುಗಿಸಿಕೊಂಡು ಆತ್ಮನನ್ನು ಕಾಣುತ್ತಾನೆ.

— ಕಠ

ತಾನಾರೆಂಬುದನ್ನು ಅರಿಯಲಿಚ್ಛಿಸುವವರೇ ಕೋಟಿಗೊಬ್ಬರು. ಅವರು ಹೊರಗಿನ ವಿದ್ಯಮಾನಗಳನ್ನು ನೋಡುತ್ತಾ ಕುಳಿತಿರಲು ಬಯಸುವುದಿಲ್ಲ. ತನ್ನನ್ನು ತಾನು ಅರಿತವನು ಸಿಕ್ಕುವುದು ದುರ್ಲಭ.

ಈಗಿನ ಲೋಕ ವ್ಯವಹಾರವು ಹೀಗೇ ಇದೆ. ಶತ್ರುಗಳನ್ನು ಕೊಲ್ಲುವ ಮಾರಣ ಕೃತ್ಯೆಯನ್ನು ಸೃಷ್ಟಿಸುವ ತಾಂತ್ರಿಕರು ಇದ್ದಾರೆ. ಅವರು ಮಹಾಮೂರ್ಖರು. ಶತ್ರುವಿನೊಡನೆ ತಮ್ಮನ್ನು, ಲೋಕದ ಜೀವರಾಶಿಗಳನ್ನು, ನಿರ್ನಾಮ ಮಾಡಬಲ್ಲ ಮಹಾ ಯಾಂತ್ರಿಕರು, ಈಗ ಲೋಕ ಪೂಜ್ಯರಾಗಿದ್ದಾರೆ. ಅವರ ರಹಸ್ಯಗಳನ್ನು, ಚಿಲ್ಲರೆ ಫಿರಂಗಿ, ರಾಕೆಟ್ಟುಗಳನ್ನು ಮಾರಿ ದಲ್ಲಾಲಿಯಿಂದ ಧನವಂತರೂ ಲೋಕದಲ್ಲಿ ಮಹಾ ಗಣ್ಯರೂ ಆಗಿ ಮೆರೆಯುತ್ತಾ ಇರುವವರೂ ಇದ್ದಾರೆ. ರಾಜಕಾರಣಿಗಳೂ, ರಾಷ್ಟ್ರಗಳ ನಾಯಕರೂ ತಮ್ಮ ಎದುರಾಳಿಗಳ ತಪ್ಪನ್ನು ಮಾತ್ರ ನೋಡಬಲ್ಲರು.

ಇಂದ್ರಿಯಗಳು ಹಾಗೆಯೇ ಇವೆ. ಇದು ವಿಕಾಸದ ಫಲ. ಹೊರಗೆ ಮಾತ್ರ ಇವು ನೋಡುವಂತೆ, ಕೊರೆಯುವ ಸ್ವಯಂಭು ಎಲ್ಲಿಯೂ ಇಲ್ಲ. ಬೇಕಿದ್ದರೆ ಮ್ಯೂಸಿಯಂನಲ್ಲಿ ಬಂದು ನೋಡಿ ಎಂದು ಹೇಳುವವರೇ ಮಹಾಮತಿಗಳು.

ಅಂತರಂಗವನ್ನು ನೋಡಬಲ್ಲ ವಿವೇಕಿಗಳು ಮೇಲಿನ ಲೆಕ್ಕಾಚಾರದಂತೆ ಎಂಟು ನೂರು ಜನ ಮಾತ್ರ ಈ ವಿಶ್ವದಲ್ಲಿದ್ದಾರೆ. ಇದು ಬಹುಮತದ ಕಾಲವಾದುದರಿಂದ ಅವರ ಓಟಿಗೆ ಬೆಲೆ ಇಲ್ಲ. ಅವರು ಅಭ್ಯರ್ಥಿಗಳ ಅಂತರಂಗವನ್ನು ಬಲ್ಲವರಾದುದರಿಂದ ಪೋಲಿಂಗ್ ಬೂತಿಗೆ ಬರುವುದೂ ಇಲ್ಲ. ಆದುದರಿಂದ ಅವರು ಸುಖವಾಗಿದ್ದಾರೆ.

ಅಪರಂಜಿ ಕಿಡಿ

— ಆನಂದ್

ಬನ್ನೇರಘಟ್ಟದಿಂದ ಪರಾರಿಯಾದ ಸಿಂಹದಿಂದ ಮನುಷ್ಯರಿಗೆ ಅಪಾಯವಿಲ್ಲ.

— ವನ್ಯ ಅಧಿಕಾರಿ

ಇದೇ ಆಶ್ವಾಸನೆ ಸಿಂಹಕ್ಕೆ ಸಿಗುತ್ತೋ ?

* * * *

ಧಾವಿಸಿರಿ, ಸೇಲ್ಸ್ ಮುಗಿಯುವ ಮೊದಲೇ !

— ಸೀರೆ ಸೇಲ್ಸ್ ಜಾಹೀರಾತು

ಯಾವ ದಿಕ್ಕಿನಲ್ಲಿ ?

* * * *

ಎನ್. ಆರ್. ಐ. ಲೇ ಔಟ್ ನಿರ್ಮಾಣಕ್ಕೆ ಹೈಕೋರ್ಟ್ ತಡೆ.

—ಸುದ್ದಿ

ಅ-ನಿವಾಸಿ ಭಾರತೀಯರು ಅಂದರೆ ಏನು ಅಂತ ಅರ್ಥವಾಯಿತು !

* * * *

ಹೊಸಪೇಟೆಗೆ ಉಕ್ಕು ಕಾರ್ಖಾನೆ ಬದಲು ಥರ್ಮಲ್ ಘಟಕ.

—ಪತ್ರಿಕೆ

ಸರಿ, ಕಾವಲಿಯಿಂದ ಒಲೆಗೆ ! !

* * * *

ಶ್ರೀ ಹೆಗಡೆ ಸಿ.ಬಿ.ಐ. ತನಿಖೆಗೆ ಒಪ್ಪಿದರೆ ನಾವು ಯಾವ ತನಿಖೆಗೂ ಸಿದ್ಧ.

— ಶ್ರೀ ದೇವೇಗೌಡ

ಹಾವೂ ಸಾಯುಲ್ಲ, ಕೋಲೂ ಮುರಿಯುಲ್ಲ !

* * * *

ಬೆಂಗಳೂರಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕಾಗಿ ಆಗ್ರಹ.

— ಪತ್ರಿಕೆ

ವಿಜಯನಗರದ ಕಾರ್ಖಾನೆ ಬಂದಾಗ ಇದೂ ಆರಂಭವಾಗುತ್ತಂತೆ !

*　　*　　*　　*

ಶಿವಮೊಗ್ಗದಲ್ಲಿ ಇತಿಹಾಸ ಸಮ್ಮೇಳನ : ಚರಿತ್ರೆಗೆ ಹೊಸ ವ್ಯಾಖ್ಯಾನ ನೀಡಲು ಕರೆ.

— ಸುದ್ದಿ

ಈ ಪ್ರಯತ್ನವನ್ನು ರಾಜಕಾರಣಿಗಳು ಸತತವಾಗಿ ಮಾಡುತ್ತಿದ್ದಾರಲ್ಲ ?

*　　*　　*　　*

ಮೊಹಿಂದರ್ ಅಮರನಾಥ್‌ಗೆ ೨೦,೦೦೦ ರೂ. ದಂಡ.

— ಸುದ್ದಿ

ಇಂತಹ ಗೂಗ್ಲಿಯನ್ನು ಅವರು ಎಂದೂ ಎದುರಿಸಿರಲಿಲ್ಲವೇನೋ ?

*　　*　　*　　*

ಭಾರತದಲ್ಲಿ ರಷ್ಯನ್ ಉತ್ಸವ ಆಯ್ತು ; ಈಗ ಫ್ರೆಂಚ್ ಉತ್ಸವ ; ಮುಂದೆ ಯಾವ ದೇಶವೋ ?

— ಓದುಗರ ಪ್ರಶ್ನೆ

ಸ್ವೀಡನ್ ಇರಬಹುದು !

6

ಸ್ಥಳಗಳ ಹೆಸರು

— ಶ್ರೀನಿವಾಸರ 'ಅರುಣ'ದಿಂದ

ನಮ್ಮ ಸೀಮೆಯ ಕೆಲವು ಊರಹೆಸರಿನ ಅರ್ಥ
ಬಹು ರಮ್ಯವಾಗಿ ಬಹು ಭಾವಗರ್ಭಿತವಾಗಿ
ರಸಪುಷ್ಟವಾಗಿಹುದು.. ಇವಕುರಿತು ಯೋಚಿಸಲು
ನಮ್ಮ ಜನಗಳ ಮನಸು ಎಷ್ಟು ಎಳಸಾದುದು
ಎಷ್ಟು ಸರಳ ಎಂದು ತಿಳಿಯುವುದು ; ಅಲ್ಲದೆ
ರಾಮಾಯಣದ ಕತೆಯು ಭಾರತದ ಕತೆಗಳು
ನಮ್ಮವರ ಭಾವನೆಯೊಳೂರಿಹುದು ತಿಳಿಯುವುದು ;
ಕತೆಯವಿವರದಿ ಜನರ ಊಹೆ ಸರಸತೆಯಿಂದ
ನಲಿದು ಮೃದುಹಾಸ್ಯದಲ್ಲಿ ಹರಿದಿಹುದು ತಿಳಿಯುವುದು ;
ಒಮ್ಮೊಮ್ಮೆ ಒಂದುದುಃಖದ ಕತೆಯ ನೆನೆದು ಜನ
ಅನುತಾಪದಿಂದೆ ಮರುಗುವ ತೆರನು ತಿಳಿಯುವುದು ;
ನಿಮಗೆ ಬೇಸರವಾಗದಿರೆ ನನಗೆ ತಿಳಿದಿರುವ
ಇಂತ ಹೆಸರನು ಕುರಿತ ಕತೆಯೊಂದ
ಹೇಳುವೆನು.

ಪಾವಗಡ ತಾಲ್ಲೂಕು

ಯಾವುದೋ ಸಮ್ಮತು–ಹೆಸರು ಜ್ಞಾಪಕ ಬರದು—
ಅಲ್ಲಿ ಲೇಪಾಕ್ಷಿ ಎಂಬೊಂದು ಹೆಸರಿನ ಊರು.
ಲೇಪಾಕ್ಷಿ : ಈ ಹೆಸರಕೇಳಿ ಯಾರಾದರೂ
ಆ ಊರಜನರನೋ ಆ ಕಡೆಯ ಜನರನೋ
ಇದರರ್ಥ ಕೇಳುವರು ; ಎನ್ನಂತಮುಂದುಕರನು
ಕೇಳಿದರೆ ಫಲವುಂಟು ; ಈಗ ಜನದಲಿ ಇಂತ
ಸರಸತೆಯು ಮರೆದಿಹುದು ; ಅಲ್ಲದಿರೆ ಚಿಕ್ಕವರು
ಏನಾದರೂ ಕೆಲಸಕಾಗಿ ಕುಡುಗೋಲನೋ
ಕೊಡಲಿ ಮಚ್ಚನೊ ತೆಗೆದುಕೊಂಡು ಹೊರಟಿರಬಹುದು ;
ನಿಂತು ನಿಮ್ಮೊಡನೆ ಮಾತಾಡುತಿರಲವರಿಗೆ
ಹೊತ್ತಿಲ್ಲದಿರಬಹುದು ; ಮುದುಕರನು ಕೇಳಿದರೆ

ಅವರಿಗೆಂತೂ ಕೆಲಸವಿಲ್ಲ ಕಟ್ಟೆಯಮೇಲೆ
ಬಿಸಿಲುಕಾಯಿಸಿಕೊಂಡು ಕುಳಿತಿಹರು ; ನೀವವರ
ಮಾತನಾಡಿಸಿದರೆಯೆ ಸಾಕು ಕತೆಹೇಳುವರು.
ಹಿಂದೆ ಶ್ರೀರಾಮದೇವರು ಕಾಡಿನೊಳಗಿರಲು
ಸೀತಾಮ್ಮನವರ ರಾವಣನೊಯ್ದು ಹೋದಾಗ
ಸತಿಯ ಹುಡುಕುತಲವರು ಕಾಡಿನಲಿ ಅಲೆಯುತ್ತ
ಕಾರದಿವಸದ ಸೂರ್ಯಮಂಡಲವ ಪೋಲುತಿಹ
ಮೊಗದಿಂದ ಬಂದರೀಸ್ಥಲಕೆ ; ಲಕ್ಷ್ಮಣಹಿಂದೆ.
ಬರುವ ಮುನ್ನವೆ ದೊಡ್ಡದಾಗಿ ಏನೋ ಇಲ್ಲಿ
ಬಿದ್ದಿಹುದಕಂಡರು ; ಒಂದು ಪಕ್ಷಿಯಪೋಲಿದೆ :
ಹರಿದಿರುವಗರಿ ; ಸುರಿದನೆತ್ತರು ; ನೋಡುವರೆ
ಘೋರವಾಗಿಹುದು. ಶ್ರೀರಾಮದೇವರು ನೋಡಿ
ಕನಲಿದರು ; "ಲಕ್ಷ್ಮಣಾ ಸೀತೆಯನು ಕೊಂದಿರುವ
"ರಾಕ್ಷಸನು ಬಿದ್ದಿಹನುನೋಡು ; ಸೀತೆಯನಿವನು
"ಕೊಂದು ತಿಂದಿರಬೇಕು ; ಬಿಲ್ಲುಬಾಣವನು ಕೊಡು ;
"ಈಗಲೇ ಇವನ ಕೊಲ್ಲುವೆನು." ಎಂದುದ ಕೇಳಿ
ತಮ್ಮ ಲಕ್ಷ್ಮಣನೆಂದ "ಅಣ್ಣಯ್ಯ ನೋಡುವರೆ
"ಇಲ್ಲಿ ಬಿದ್ದಿಹುದು ರಾಕ್ಷಸನಲ್ಲ ; ಯಾವುದೋ
"ಪಕ್ಷಿ ಪೆಟ್ಟನುತಿಂದು ಬಿದ್ದಿಹುದು ; ಸಾಯುತಿದೆ ;
"ಯಾರೆಂದು ನೋಡುವೆನು." ಎನೆ ರಾಮದೇವರು
ಆಗಲಿ ಎಂದು ಜತೆಯಲೆ ಬಂದು ನೋಡಿದರು.
ಪಕ್ಷಿ ಅದು ; ಜೀವ ದೇಹವಬಿಡಲು ತುಡಿಯುತಿದೆ
ಆದರೂ ಬಿಡದೆ ತಡೆದೇಕೊ ಬಿಗಿಹಿಡಿಯುತಿದೆ,
ಕಣ್ಣ ಮೇಲ್ಗಡೆ ಬಿಳಿಯಪರೆ ಮುಸುಕಿಯೊಮ್ಮೊಮ್ಮೆ
ತೆರೆಯೆ ಕಣ್ಣಿನ ತೀವ್ರ ಕಾಂತಿ ಕುಗ್ಗಿದರ್ೂಡೆಯು
ಬರಮಿಂಚಿನಂತೆ ಮಸಮುಸಕಾಗಿ ಹೊಳೆಯುತಿದೆ.
ತೊಳಲುತಿಹ ಜೀವವನು ನೊಂದಿರುವ ದೇಹವನು
ಸುರಿದಿರುವ ನೆತ್ತರನು ನೋಡಿ ರಾಮನ ಮನದಿ–
ಸರ್ವಲೋಕಶರಣ್ಯನಲ್ಲವೇ ದೇವರು—
ಕನಿಕರವು ಮೊಳೆಯಿತು. ಇವನು ಯಾರೇ ಇರಲಿ
ಇವನ ಸಲಹುವುದೆ ಸರಿಯೆಂದು ಯೋಚಿಸಿ ತನ್ನ

ಎಳೆತಳಿರ ತೆರದ ಕೋಮಲವಾದ ಬೆರಳುಗಳ
ಮೃದುವಾದ ಸೋಂಕಿಂದೆ ಮೆಲುಮೆಲನೆಯುದ ತಟ್ಟಿ
ಸತಿಗೆ ಮರುಗುವ ಕತದಿ ಇನಿಸು ದೈನ್ಯವ ತಳೆದ
ಇನಿಯ ಸುಣ್ದನಿಯಿಂದೆ ಪಕ್ಷಿಯನು ಎಬ್ಬಿಸಲಂ
ತೆಲುಗುಮಾತಿನಲಿ "ಲೇ ಪಕ್ಷಿ" ಎಂದುಸುರಿದನು.
"ಲೇಪಕ್ಷಿ" ಎನ್ನುವುದು ತೆಲುಗು ; ಕನ್ನಡದೊಳದು
"ಏಳು ಪಕ್ಷೀ" ಎಂದು ಅರ್ಥವನು ಕೊಡುತಿಹುದು.
ಲೇ ಪಕ್ಷಿ ಎಂದು ಶ್ರೀರಾಮನೆಬ್ಬಿಸಲಾಗ
ಸೀತೆಯನು ಕೊಂಡೊಯ್ವ ಕಾಲದಲಿ ರಾವಣನ
ತಡೆದು ಹೋರಾಡಿ ದೇವಿಯ ಬಿಡಿಸುವರೆ ನೋಡಿ
ಮರಣಘಾತವ ಪಡೆದು ಬಿದ್ದು ಶ್ರೀರಾಮನಿಗೆ
ಸೀತಾಮ್ಮನವರ ಈಹದನ ತಿಳಿಸಲಿಕಾಗಿ
ತೀವ್ರಯಾತನೆಯನಾದರು ಸಹಿಸಿ ಜೀವವನು
ಧರಿಸಿ ಬಿದ್ದಿದ್ದಾ ಜಟಾಯು ಪರಮಾತುಮನ
ಕರದ ಅಮೃತಸ್ಪರ್ಶದಿಂದಲುಂ ಕಿವಿಗಿಳಿದ
ಸೊಗದಮಂಜುಳವಾಣಿಯಿಂದಲುಂ ಬೇನೆಯನು
ಮರೆದು ಮೆಲ್ಲನೆ ಕಣ್ಣ ತೆರೆದು ನಡೆದುದ ಪೇಳಿ
ದೇವದೇವನ ಕಾರ್ಯದಲ್ಲಿ ಜೀವವನು ತೊರೆದು
ಅವನಡಿಯೊಳೊಡಲನಿರಿಸಿದನು. ಬಲ್ಲಿರಿ ಇದನು.
ಆಮೇಲೆ ನಡೆದುದನು ರಾಮಾಯಣದೊಳೆಲ್ಲ
ಕೇಳಿತಿಳಿದಿರುವರು. ಜಟಾಯುವನು ದೇವರು
ಎಬ್ಬಿಸಲಿಕೆಂದು ಲೇಪಕ್ಷಿ ಎಂದಾಸ್ಥಲದಿ
ಜನರು ಒಂದೂರಕಟ್ಟಿ ಅದನುಲೇಪಕ್ಷಿ
ಎಂದು ಕರೆದರು ; ಅದೇ ಲೇಪಾಕ್ಷಿಯಾಗಿಹುದು.

ಈ ಕತೆಯ ಕೇಳಿ ಯಾರೂ ರಾಮದೇವರು
ತೆಲುಗು ಮಾತಾಡುತಿದ್ದರೆ ಎಂದು ಕೇಳದಿರಿ,
ನಿಮಗೆ ನನಗೆರಡು ಮೂರೇಮಾತು ಬರಬಹುದು ;
ದೇವರಿಗೆ ಬಾರದಿಹ ಮಾತುಂಟೆ ? ಆ ಮೇಲೆ
ದೇವರಂತಿರಲಿ ಜಟಾಯುವನು ಎಬ್ಬಿಸಲು
ತೆಲುಗೇಕೆ ಅವನಿಗೂ ತೆಲುಗು ತಿಳಿಯುತಲಿತ್ತೆ ?—

ಇದುಕೂಡ ಸರಿಯಾದ ಮಾತಲ್ಲ. ನಿದ್ರಿಪನ
ಎಬ್ಬಿಸುವುದಕೆ ಯಾವಮಾತೇನು ? ತಟ್ಟಿದರೆ
ಏಳುವನು ; ಜತೆಗೆ ಸುಮ್ಮನೆ ಮಾತಹೇಳುವರು.
ತೆಲುಗಿನಲಿ ಏಕೆ ಹೇಳಿದರು ಎಂದಚ್ಚರಿಯೆ !
ತೆಲುಗು ಸೀಮೆಯಲಿ ಬಿದ್ದಿಹ ಪಕ್ಷಿಯನು ಕರೆದು
ಮಾತನಾಡಿಸುವುದಕೆ ತೆಲುಗುಮಾತನು ಬಿಟ್ಟು
ಇನ್ಯಾವ ಮಾತನಾಡುವರು ? ಇನ್ಯಾವುದನು
ಆಡಿದೊಡೆ ಅದಕೆ ತಿಳಿಯುವುದು ? ಆದರಿಂದಲೇ
ರಾಮದೇವರು ತೆಲುಗಿನಲಿ ಮಾತನಾಡಿದರು.
ರಾಮಾಯಣದಲಿ ಲೇಪಾಕ್ಷಿ ಎಂಬೀಮಾತು
ಇಲ್ಲವೆನೆ ವಾಲ್ಮೀಕಿ ಮುಂದೆನಡೆದುದನೊರೆವ
ಆವಸರದಿ ಇದನು ಬಿಟ್ಟಿರಬೇಕು.



"ಕಷ್ಟ ಭಿಕ್ಷೆ ಕಾನೂನು ಜಾರಿಗೆ ಬರುತ್ತೆ, ಎರಡ್ರೂಪಾಯಿ ಹಾಕಿ ಸ್ವಾಮಿ!"

ಪೃಥ್ವೀವಲ್ಲಭರು

— ಜಿ.ಎಸ್.ಜಿ.

– ೧ –

ಆಸ್ಪತ್ರೆ ಸಂದರ್ಶನ

" Perhaps this is the only nation where anybody can hold any portfolio despite his qualification for the post. The stranger thing is, immediately after assuming the post he gets the authority to talk on any topic relating to the post off hand".

ಭಾರತಕ್ಕೆ ಭೇಟಿ ಮಾಡಿದ್ದ 'ಬುದ್ಧಿ ಜೀವಿಗಳ' ನಿಯೋಗವೊಂದು ಖಾಸಗಿಯಾಗಿ ಮೇಲಿನಂತೆ ಹೇಳಿದ್ದರಂತೆ ನಮ್ಮ ಪ್ರೊಫೆಸರ್ ಜತೆ ಮಾತನಾಡುವಾಗ.

ನಿಯೋಗದವರಿಗೇ ಬುದ್ಧಿಯಿಲ್ಲ. ನಮ್ಮ ದೇಶದಲ್ಲಿ ಯಾರು ಯಾವ ವಿಷಯದ ಮೇಲೂ ಮಾತನಾಡಬಹುದು. ಮುಖ್ಯವಾಗಿ ಅವರಿಗೆ ಮಾತನಾಡಲು ಬರಬೇಕು. ಕೇಳುವವರಿಗೆ ಕಿವಿ ಇರಬಾರದು ಎಂದಿದ್ದರು ನಮ್ಮ ಪ್ರೊಫೆಸರು.

ಇದು ಈಗ ಯಾಕೆ ಹೇಳೋಕೆ ಬಂದೆ ಎಂದರೆ. ನಮ್ಮ 'ಕಬಡಪ್ಪ' ನಮ್ಮೂರಿನ ಲೀಡರ್ರು. ಮಾತು ಅರಳು ಹುರಿದಂತೆ. ಜನ ಅವನ ಮಾತಿಗೆ ಮರುಳಾಗಿ, ಎತ್ತಿ ಮೆರೆಸಿದ್ದರು. ಕಬಡಪ್ಪ ನನ್ನ ದೋಸ್ತು. "ನನ್ನನ್ನು ನಂಬು. ನೀನು ಏನಾಗ್ತಿ ನೋಡು" ಎಂದಿದ್ದ. ನಾನು ಅವನನ್ನು ನಂಬದೇ ಕೆಟ್ಟೆ. ಕಾಲ ಮಿಂಚಿಹೋಗಿದೆ.

ಕಬಡಪ್ಪ–ಕಬಡಪ್ಪನವರಾಗಿ-ಅದೂ-ಇದೂ ಆಗಿ-ಕೊನೆಗೆ ಮಂತ್ರಿಗಳಾದರು. ಅವರು ಇದ್ದಿದ್ದರೆ ನಮ್ಮ ಊರು ಇನ್ನೇನು ಆಗುತ್ತಿತ್ತೋ. ಅನ್ಯಾಯವಾಗಿ ಹೋಗಿಬಿಟ್ಟರು ಪಾಪ !

ಅವರ ಕಾಲದಲ್ಲಿ ನಮ್ಮೂರಿಗೆ ಒಂದು ಒಳ್ಳೆಯ ಆಸ್ಪತ್ರೆ ಬಂದಿತ್ತು. ಅದಕ್ಕೆ ಒಂದು ಕಾಲೇಜೂ ಅಂಟಿಕೊಂಡು ಹೆಸರುವಾಸಿಯಾಗಿತ್ತು.

ಹಾಲಿ ಇದ್ದ Post - mortem ಕಟ್ಟಡ ಸಾಲದು ಅಂತ ಹೊಸ ಕಟ್ಟಡ ಕಟ್ಟಿಸಿದ್ದರು. ಅದರ ಉದ್ಘಾಟನೆಗೆ ಕಬಡಪ್ಪನವರೇ ಬರಬೇಕಾಗಿತ್ತು. ಅವರ ಅದೃಷ್ಟ. ಬರಲಿಲ್ಲ.

ಹೊಸದಾಗಿ ಒಂದು ಶಸ್ತ್ರ ಚಿಕಿತ್ಸೆಯ ಮಂದಿರವನ್ನು ಕಟ್ಟಿಸಿದ್ದರು. ಕಬಡಪ್ಪನವರಿಂದಲೇ ಉದ್ಘಾಟನೆ. ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ಬಿಡುವು ಮಾಡಿಕೊಂಡು ಬಂದಿದ್ದರು.

ಅವರಿಗೆ ಒಂದು ಕೆಟ್ಟ ಆಸೆ. ಖುದ್ದಾಗಿ ಒಂದು ಶಸ್ತ್ರಕ್ರಿಯೆ ನೋಡಬೇಕೆಂಬುದು.

ಕಾಲೇಜು ಕಮಿಟಿ ಸರ್ಜನ್‌ಗಳಿಗೆ ನಿರೂಪ ಕಳಿಸಿತ್ತು. ಸರ್ಜನ್‌ಗಳು ಹಣೆ ಹಣೆ ಚಚ್ಚಿಕೊಂಡಿದ್ದರಂತೆ. ಪಾಪ ! ಯಜ್ಞ ಪಶುವಿನ ಸ್ಥಿತಿ ನೆನೆದುಕೊಂಡಿರಬೇಕು.

ಏನೇ ಇರಲಿ, ಎಲ್ಲವೂ ಸಿದ್ಧವಾಗಿತ್ತು. ಒಳಗೆ ಬರಬೇಕಾದರೆ ಪರಿವಾರವನ್ನು ಬಿಟ್ಟು ಬರಬೇಕೆಂದು ತಿಳಿಸಿದ್ದರು ಡಾಕ್ಟರುಗಳು. ಆದರೂ ಐದಾರು ಜನರೊಡನೆ ಒಳಗೆ ನುಗ್ಗಿದ್ದರು ಕಬಡಪ್ಪನವರು.

ಬುದ್ಧಿವಂತ ಡಾಕ್ಟರುಗಳು. ಏನೇ ಆದರೂ ಪ್ರಾಣ ಹೋಗಿರಬಾರದು. ಅಂತಹ ಒಂದು ಕೇಸನ್ನು ಆರಿಸಿದ್ದರು.

ಒಂದು ದಿಕ್ಕಿಲ್ಲದ ಮುದುಕಿ. ಅದರ ಭುಜದ ಮೇಲೊಂದು ಗಂಟು. ಅದನ್ನು ಕುಯ್ದು ಹಾಕಬೇಕಾಗಿತ್ತು. ಹೋದರೆ ಕೈ ಹೋದೀತು. ಪ್ರಾಣ ಹೋಗೋಲ್ಲ. ತಾವೂ Safe, ಮುದುಕೀನೂ Safe !

ಎಲ್ಲ ಸಿದ್ಧವಾಗಿತ್ತು. ಅಜ್ಜಿಗೆ ಲೋಕಲ್ ಅನೆಸ್ಥೇಶಿಯಾ (Local anaesthesia) ಕೊಟ್ಟಿದ್ದರು. ಮುದುಕಿ ಕಣ್ಣು ಬಿಟ್ಟುಕೊಂಡೇ ಇತ್ತು.

ಕಬಡಪ್ಪನವರು : "ಇದೇನು ಎಚ್ಚರ ತಪ್ಪಿಸಿಲ್ಲವಲ್ಲ ?!"

ಡಾಕ್ಟರು : "Local anaesthesia, Sir."

ಕಬಡಪ್ಪನವರು : "Very good". "Note down" ಎಂದು ತಮ್ಮ P.A.ಗೆ ತಿಳಿಸಿದರು.

ದೇವರ ದಯೆ. ಆಪರೇಶನ್ ಚೆನ್ನಾಗಿಯೇ ಆಯಿತು. ಮುದುಕಿಯೂ ಉಳಿಯಿತು. ಡಾಕ್ಟರುಗಳೂ ಬದುಕಿದರು.

ಕಬಡಪ್ಪನವರಿಗೆ ಅತೀವ ಸಂತೋಷವಾಗಿತ್ತು. ಡಾಕ್ಟರುಗಳ ಸಭೆ ಸೇರಿಸಿದರು. ಕಬಡಪ್ಪನವರೇ ಮಾತನಾಡಿದರು. "ಈ ಆಸ್ಪತ್ರೆಯ ಚಟುವಟಿಕೆ ನೋಡಿ ಭಾಳಾ ಸಂತೋಷವಾಗಿದೆ. ಎಲ್ಲಾ ಆಸ್ಪತ್ರೆಗಳೂ ಫಾರಿನ್ ಔಷಧ, ಫಾರಿನ್ ಉಪಕರಣ ಎಂದು ಸಾಯುತ್ತಿರುವಾಗ ಇಲ್ಲಿನ ಡಾಕ್ಟರುಗಳು ಲೋಕಲ್ ಅನಸ್ತೇಶಿಯಾ ಕೊಟ್ಟು, ಒಬ್ಬ ಮುದುಕಿ ಜೀವ ಉಳಿಸಿದ್ದಾರೆ. ಮೂರನೇ ನಂಬರ್ ಫುಟ್‌ಬಾಲ್‌ಗಿಂತಲೂ ದೊಡ್ಡದಾದ ಗಂಟನ್ನು (ಕಬಡಪ್ಪನವರು foot ball ಆಟಗಾರರಾಗಿದ್ದರು ಎಂಬುದು ಇಲ್ಲಿ ಅಪ್ರಸ್ತುತ) ಮೂರೇ ನಿಮಿಷದಲ್ಲಿ ಕಲ್ಲಂಗಡಿ ಹಣ್ಣು ಕುಯ್ದಹಾಗೆ (ಅವರಿಗೆ ಕಲ್ಲಂಗಡಿ ಹಣ್ಣು ಎಂದರೆ ಬಲು ಪ್ರೀತಿ ಎಂಬುದೂ ಅಪ್ರಸ್ತುತ) ಕುಯ್ದು ಹಾಕಿದ್ದಾರೆ. ಲೋಕಲ್ ಸಾಮಗ್ರಿಗಳಿಗೆ ಬೆಲೆ ಇಲ್ಲ ಎನ್ನುವ ಈ ಕಾಲದಲ್ಲಿ ಎಲ್ಲಾ ಲೋಕಲ್ಲಾಗಿಯೇ, ಚೆನ್ನಾಗಿ ಮಾಡಿದ್ದಾರೆ. ಎಲ್ಲಾ ಸರ್ಕಾರಿ ಆಸ್ಪತ್ರೆ ಡಾಕ್ಟರುಗಳು ಇಲ್ಲಿ ಬಂದು ಲೋಕಲ್ ಸಾಮಗ್ರಿಗಳ ಉಪಯೋಗದ ವಿಷಯದಲ್ಲಿ ತರಬೇತಿ ಪಡೆಯಬೇಕೆಂದು ನಿರೂಪ ಕಳಿಸಲು ಏರ್ಪಾಡು ಮಾಡುತ್ತೇನೆ. ಇದರಿಂದ ನಮಗೆ ಬೇಕಾದಷ್ಟು ಫಾರಿನ್ ಎಕ್ಸ್‌ಚೇಂಜು ಉಳಿಯುತ್ತದೆ. ಈ ಆಸ್ಪತ್ರೆಗೆ ಬೇಕಾದ ಗ್ರ್ಯಾಂಟುಗಳನ್ನು ಮಂಜೂರು ಮಾಡಲು ನನಗೆ ಬಹಳ ಸಂತೋಷವಾಗಿದೆ......................"

ಹೀಗೆಯೇ ಭಾಷಣ ಸಾಗಿತ್ತು. ಸರ್ಜನ್‌ಗಳು, ಡಾಕ್ಟರುಗಳು ಸುಸ್ತೋ ಸುಸ್ತು. ಕಾಲೇಜು ಕಮಿಟಿಗೆ ಖುಷಿಯೋ ಖುಷಿ.



"ಇವತ್ತು ರಾತ್ರಿ ಕನ್ನ ಹಾಕ್ಬೇಕು. ಮಂತ್ರಿಗಳ ಮನೆ ಉತ್ತಮಾನೋ ಅವರ ಅಳಿಯಂದಿರ ಮನೆ ಲಾಭದಾಯಕಾನೋ ಹೇಳಿ ಜೋಯಿಸ್ರೆ"

ಸೊಸೆ ಬಿಟ್ಟು ಕಸ ಹೊಡಿತಿದಿಯಲ್ಲ ?

— ಜೀನಹಳ್ಳಿ ಸಿದ್ಧಲಿಂಗಪ್ಪ

ನಾನು ಹಿಂಗೇ ಕೇರ್ಯಾಗೆ ಹೋಗ್ತಾ ಇದ್ದೆ. ನಾನು ಮೊದ್ಲೇನೆ ಕೊಡ್ಲಿಗಮು ಕ್ಷಂತ ಕೊಕ್ಕೆ ಮನುಷ್ಯ ಅಂತಾ ಎಲ್ಲರ್ಗೂ ಗೊತ್ತು. ನಾನು ಬರ್ತಿದ್ದಂಗೆ ಎಲ್ರೂ ಕೊಡ್ಲಿ ಅಜ್ಜ ಬಂದ ಬಂದ ಅಂತಿದ್ರು. ನಮ್ಮನಿಗೆ ಬರ್ಲಿ ತಡಿ ಅಪ್ಪಿಂದ ಒಂದು ಒಳ್ಳೆ ಕತೆ ಕೇಳಾನ ಅಂತ ಕಾಯ್ತಿರ್ತಿದ್ರು. ನಾನು ಇವತ್ತು ಯಾರ್ ಮನಿಗೆ ಹೋಗೋದು ಅಂದ್ಕಂತ ಕೋಲೂರಿಕಂದು ನಾಕ್ಹೆಜ್ಜೆ ಇಡ್ತಿದ್ದೆ. ಅಲ್ಲೊಬ್ಬ ಹೆಣ್ ಮಗಳು ಅಂದ್ರೆ ಅದೆ ನಿಮ್ ಪಾರೋತಕ್ಕ ಬಾಗಲಾಗೆ ನಿಂತಗಂದು ಕಸ ಹೊಡಿತಿದ್ಲು.

ಆಕೆ ಕುಟಾಗೆ ಅದೂ ಇದೂ ಅಂತ ಮೊದ್ಲಿಗೆ ಮಾತಾಡಕ್ಹೋಗ್ಲಿಲ್ಲ. ಆಕೇನೆ 'ಬಾ ಅಜ ಹೋಗಂತೆ' ಅಂತ ಕರುದ್ಲು. 'ಇಲ್ ಬಿಡವ್ವ, ಬಂದು ಏನ್ಮಾಡ್ಲಿ? ಅಂದೆ. 'ಎಲೆಡಿಕೆನರೆ ಕೊಡ್ತಿದ್ದೆ' – ಅಂದಾಗ 'ಯ್ಯಾ ತಗಿ, ಈಗ ಹಕ್ಯಂದಿದ್ದೆ. ಹಗ್ಲೆಲ್ಲ ಹಕ್ಯಂಡ್ರೆ ಬಾಯಿ ಒಡದ್ಹೋಕತಿ. ಆಮ್ಯಾಲೆ ಏನೂ ತಿನ್ನಾಕಾದೀತಾ ?' ಅಂದೆ.

ಆವಾಗ ಆಕೆ ನೋಡಿ ನನಿಗೆ ತಮಾಸೆ ಮಾಡಂಗೆ ಅನಿಸ್ತು. ಕೂಡ್ಲೆ ಅದೆ ಕೈಯಾಗೆ ಕೇಳೇ ಬಿಟ್ಟೆ : "ತಾಯಿ, ಸೊಸೆ ಬಿಟ್ಟು ಕಸ ಹೊಡಿತಿದಿಯಲ್ಲ ಯಾಕೆ ?" ಅಂತ. ಅಕ್ಕ ಇದ್ದೋಳು ಈ ಮುಂದೂಕುಗೆ ಏನ್ ಬಂತು ಹಿಂಗೆ ಕೇಳ್ತಾನಲ್ಲ ಅಂದು ತಿರುಗಿ ಪ್ರಶ್ನೆ ಮಾಡಿದ್ಲು. ಮನಿಸ್ನ್ಯಾಗೆ ತನ್ ಮಗ ನೋಡಿದ್ರೆ ಈಗಿನ್ನೂ ಬೆಳೆತಿರೊ ಹುಡ್ಗ. ಇವ್ನಿಗೆ ಆಗ್ಲೆ ನಾನು ಮದ್ವೆ ಮಾಡಿ ಬಿಟ್ಟಿದೇನಾ ? ಮಗಳು ಬಿಟ್ಟು ಕಸ ಹೊಡಿತಿಯಲ್ಲಾ ಅಂದಿದ್ರೆ, ಮಗಳ್ನ ಮದುವೆ ಮಾಡಿ ಕೊಟ್ಟಿದ್ರಿಂದ ತಾನೆ ಹೊಡಯಾಕೆ ನನಿಗೇ ಈ ಗತಿಯಾಗಿರೋದು ? ಅಂತಿದ್ದ. ಇಂಥದ್ರಾಗೆ ಈ

ಮುದುಕೊಳ್ಳಿ, ಕಿಲಾಡಿ ಐತಿ ಅದ್ಕಂಡು "ಅಲ್ಲಾ ಅಜ್ಜ, ನಾಯೇನ್ ಮಗುನ್ನ ಮದ್ವೆ ಮಾಡಿದೇನಾ, 'ಸೊಸೆ ಬಿಟ್ಟು ಕಸ ಹೊಡಿಯಾಕೆ ?" ಅಂತ ಕೇಳಿದ್ಲು.

ನನಿಗೆ ಇನ್ನೂ ನಗು ಬಂತು. ನಕ್ಕೆ. "ಅಯ್ಯೊ ಹುಚ್ಚದಿಕ್ಕುಚ್ ತಾಯಿ ನೀನು ನಾ ಹೇಳಿದ್ದು ಏನೂಂತ ಸರಿಯಾಗಿ ಅರ್ಥ ಮಾಡ್ಕ್ಯಂಡಿದಿಯೊ ಇಲ್ಲೋ ? ಹಿಂಗೆ ಮಾತಾಡಿದ್ರೆ ನನ್ ಮಾತು ಹ್ಯಂಗೆ ಅರ್ಥಾಗ್ ಬೇಕು ಹೇಳು ?" ಅಂದೆ. ಅವಗ "ಅಜ್ಜ ಒಳ್ಳೆ ತಮಾಸೆ ಮಾಡ್ತಿದಿ. ಏನ್ ಹಂಗಂದ್ರೆ ?" ಅಂತ ಕೇಳಿದ್ಲು.

ಅವಗ ಹಿಂಗೆ ಹೇಳಿದೆ : "ಹೊಲದಾಗೆ ಸೊನೆ (ಸಸಿ) ಬಿಟ್ಟು ಕಸ (ಕಳೆ) ತೆಗೆಯೋದಿಲ್ವೆ ? ಹಂಗೆ. ನೀನು ಮಗುನ್ನ ಮದುವೆ ಮಾಡಿದೀಯೊ ಬಿಟ್ಟಿದೀಯೋ ನನಗೇನಂ. ಸೊಸೆ ಬಿಟ್ಟು ಕಸ ಹೊಡೆಯೋದಂದ್ರೆ ಹಂಗೆ" ಅಂತ ಹೇಳಿದೆ. ಅಕ್ಕೆ ಘೊಳ್ಳಂತ ನಕ್ಲು. ನನ್ ಕತೇಂದ್ರೆ ಹಿಂಗ್ ತಮ– ಅಂತ ಈ ಕೊಡ್ಲಿ ಸಿದ್ಲಿಂಗಜ್ಜ ನನಿಗೆ ಇಂಥ ಒಗಟು ಕತೆ ಹೇಳ್ತು ನೋಡಿ.



"ನೀರು ಹೊರುಕ್ಕೆ ಯಾಕಳ್ತೀಯಕ್ಕಾ. ಆರೋಗ್ಯ ಚೆನ್ನಾಗಿರುತ್ತೆ ಬಿಡು !"



"ಕಾಲ ಕೆಟ್ಹೋಯ್ತು ! ಬೋಫಾರ್ಸ್ ಬಾಬ್ತು ಹತ್ತು ಪರ್ಸೆಂಟ್‌ಗೆ
ಒಪ್ಪಿದ್ದೋನು ಈಗ ಐದೇ ಕೊಟ್ಟು ಓಡ್ಹೋಗಿದ್ದಾನೆ ನೋಡು ಆ
ಪಾಪಿ ಕಂಟ್ರಾಕ್ಟರ್! ಸ್ವಲ್ಪಾನಾದ್ರೂ, ನ್ಯಾಯ ನಿಯತ್ತು ಬೇಡವೇ!"

ಕೊರವಂಜಿಯಿಂದ...



ಹೆಣ್ಣು ನೋಡುಕ್ಕೆ ಬಂದಾಗ

— ರಾ. ಶಿ.

ಹೆಣ್ಣು ನೋಡುಕ್ಕೆ ಅಂತ ಅವರೆಲ್ಲಾ ಬಂದಿದ್ದಾಗಲೇನೆ, ಈ ಹಾಳು ಮಗು ಹೀಗೆ ಮಾಡಬೇಕೇ ? ಆಗೋ ಮದುವೇನೂ ತಪ್ಪಿಸಿಬಿಡ್ತೇನೋ ಅಂತ ಅದ, ದುಃಖದಲ್ಲಿ ಎರಡು ಬಿಗಿದೂ ಬಿಟ್ಟೆ, ಬಂದವರೆಲ್ಲ ಹೋದ ಮೇಲೆ.

* * * *

ಏನಾಯ್ತು ಅಂತೀರಿ ! ಭಾನುವಾರದ ಸಂಜೆ ರಾಮು, ಗೋಪಿ ಮನೆಗೆ ಬಂದಿದ್ದರು. ನಾವು ಮೂವರೂನೂ ಒಟ್ಟಿಗೆ ಎಂಜಿನಿಯರಿಂಗ್ ಪ್ಯಾಸು ಮಾಡಿದ್ದೆವು. ಬೆಂಗಳೂರಿನಲ್ಲಿ ಕಂಟ್ರ್ಯಾಕ್ಟ್ ಮಾಡ್ತಾ ನಾನು ಉಳುಕೊಂಡಿದ್ದೆ. ಅವರಿಬ್ಬರೂ ಉತ್ತರದಲ್ಲೊಬ್ಬ, ದಕ್ಷಿಣದಲ್ಲೊಬ್ಬ ದೊಡ್ಡ ಕೆಲಸದಲ್ಲಿದ್ದರು. ಬೆಂಗಳೂರಿಗೆ ಸರ್ಕಾರಿ ಕೆಲಸದ ಮೇಲೆ ಅವರು ಬಂದಾಗ, ಬೆಣ್ಣೆ ಹಚ್ಚಲು ನಾನು ಹೋದಾಗ, ಅವರೇ ನನ್ನ ಹಳೇ ದೋಸ್ತು ಅಂತ ತಿಳಿದಾಗ, ತೋಳ್ಮೇಲೆ ಕೈ ಹಾಕಿ, 'ಮನೆಗೆ ಬನ್ನಿರೋ, ಕ್ಲಬ್ಬಿನಲ್ಲಿ ಏನು ಸುಖ' ಅಂತ ಕರೆದಿದ್ದೆ.

ಭಾನುವಾರ ಸಂಜೆ ನಮ್ಮನೇಲಿ ಕೈಂಕರ್ಯ ನಡೆಸಿದೆ. ನನ್ನ ಕಸುಬಿನಲ್ಲಿ ಒಂದು ಉದ್ಧರಣೆ ಸುರಿದರೆ, ಒಂದು ಪಂಚಪಾತ್ರೆ ಅಷ್ಟು ನನಗೇ ಹೇಗಾದರೂ ಹಿಂತಿರುಗೋದು ಮಾಮೂಲು. ಹಾಗಾಗಿ ರಾಮು ಗೋಪೀಗೆ ತೀರ್ಥ ಪ್ರಸಾದ ಹಂಚೋದರಲ್ಲಿ ತೆರೆದ ಅಂಗೈ ನನ್ನದು. ಕಡೆ ಕಡೆಗೆ ಬಲು ಅನ್ಯೋನ್ಯವಾಗಿ ಬಿಟ್ಟರು. ಮನೆ ವಿಚಾರವನ್ನೆಲ್ಲಾ ಕೇಳಿದರು. ಮಗಳ ಮದುವೆ ಆಗಿಲ್ಲ ಅಂತ ಹೇಳ್ದಾಗ, ಗೋತ್ರ ಯಾವುದೋ ಅಂದ ರಾಮು. ತಡೆಯೋ ಕೇಳಿ ಹೇಳ್ತೀನಿ ಅಂತ ಹೆಂಡತೀನ ಕರೆದು 'ನನ್ನ ಗೋತ್ರ ಏನೇ' ಅಂತ ಕೇಳಿದೆ. ತಡೀರಿ ಅಂದ್ರು ಪಂಚಾಂಗದಲ್ಲಿ ಗುರ್ತು ಹಾಕಿದೀನಿ, ನೋಡಿ ಹೇಳ್ತೀನಿ ಅಂತ ಆಕೆ ದೇವರ ಗೂಡಿನ ಬಾಗಿಲು ತೆಗೆದು

ಪಂಚಾಂಗ ತೆಗೆದುಕೊಂಡು ಬಂದು, "ಸ್ವತಂತ್ರ ಕಪಿ ಗೋತ್ರ" ಎಂದಳು.

ಗೋಪಿ ನಕ್ಕ 'ಹೆಂಡತಿ ಕೈಲಿ ಹೀಗೆ ಹಾಸ್ಯ ಮಾಡಿಸಿಕೊಳ್ಳುತ್ತೀಯಲ್ಲೋ, ನಾಚಿಕೆ ಆಗುಲ್ವೇನೋ' ಎಂದು ಅವಳೆದುರಿಗೆ ನನ್ನ ಬೆನ್ನಿಗೆ ಒಂದು ಗುದ್ದು ಕೊಟ್ಟ. ಬಾಯಲ್ಲಿದ್ದ ಗುಟುಕು ಗಂಟಲಿಗೆ ಇಳಿಯದೆ, ಹೊರಕ್ಕೆ ಅವನ ಮೇಲೇ ಬಿತ್ತು.

ರಾಮು ಆಗ ಗದರಿಕೊಂಡ. 'ಸಂಸಾರ ಇರೋ ಮನೆ, ಬೆಳೆದ ಮಕ್ಕಳಿದ್ದಾರೆ. ಹುಡುಗರ ಹಾಗೆ ಆಡ್ತೀರಲ್ಲೋ! ಹಪ್ಪಳ ತಿನ್ನೋ' ಅಂದ "ನೋಡಪ್ಪಾ, ನಮ್ಮ ಕಚೇರೀಲಿ ಒಬ್ಬ ಜಾಣ ಹುಡುಗ ಕೆಲಸಕ್ಕೆ ಸೇರಿದ್ದಾನೆ. ನಿಮ್ಮ ಜಾತಿಯವನೇ ಅವನು. ಅವರಪ್ಪ ಈ ಊರಲ್ಲೇ ಇದ್ದಾರೆ. ಹುಡುಗನು ಇಲ್ಲಿಗೆ ಬಂದಿದ್ದಾನೆ, ವಿಚಾರಿಸು. ಮದುವೆ ಆದರೆ ನನಗೆ ತುಂಬಾ ಸಂತೋಷ" ಎಂದು ಬಿಕ್ಕಿದ. 'ಶಾಮಾಶಾಸ್ತ್ರೀ ಅಂತ ಹುಡುಗನ ಹೆಸರು. ಬಲು ಜಾಣ' ಅಂತ ಹೇಳಿದ.

○ ○ ○ ○

ರಾಮು, ಗೋಪೀನ ಬಿಟ್ಟು ಬಂದು, ಬಿದ್ದುಕೊಂಡಿದ್ದು ಮಸಕು ಮಸಕಾಗಿ ಜ್ಞಾಪಕ. ಸೋಮವಾರವೆಲ್ಲ ಒಂದು "ಥರ್‍ರಾ" ಇತ್ತು. ಸಂಜೆ ಹೊತ್ತಿಗೆ ಮನೆಯಾಕೆ ಎದುರುಬಿದ್ದು 'ನಿನ್ನೆ ಹೇಳಿದರಲ್ಲ; ನಿಮ್ಮ ಸ್ನೇಹಿತರು, ಶಾಮಾಶಾಸ್ತ್ರಿ ಅಂತ ವರ ಇದಾನೆ ಅಂತ. ಮೂರನೆ ಬೀದೀಲಿ ಸುಬ್ಬರಾಯ ಶಾಸ್ತ್ರಿಗಳಿಲ್ಲವೇ? ಅವರ ಮಗ ಇರಬಹುದು ಅಂತ ಅನುಮಾನ ಬಂತು. ಇವತ್ತು ಮಧ್ಯಾಹ್ನ ಮೆಣಸಿನ ಪುಡಿ ವೆಂಕಮ್ಮನಿಗೆ ಹೇಳಿ ಕಳಿಸಿ, ಮೆಲ್ಲಗೆ ವಿಚಾರಿಸ್ಕೊಂಡು ಬಾ ಅಂತ ಹೇಳಿದೆ. ಆಕೆ ಹೋಗಿ ವಿಚಾರಿಸಿಕೊಂಡು, ಬಂದು ಸಂಜೆ ಮುಂದೆ ಹೇಳಿದಳು. ಶಾಮು ಅಂತಲೇ ಅವರ ಮೊದಲನೆ ಹುಡುಗನ ಹೆಸರಂತೆ. ದೆಲ್ಲೀಲೆಲ್ಲೋ ದೊಡ್ಡ ಕೆಲಸದಲ್ಲಿದ್ದಾನಂತೆ. ಸರ್ಕಾರಿ ಕೆಲಸದ ಮೇಲೆ ಈ ಊರಿಗೆ ಒಂದು ವಾರ ಇರುಕ್ಕೆ ಬಂದಿದ್ದಾನಂತೆ. ಸುಬ್ಬರಾಯ ಶಾಸ್ತ್ರಿಗಳು ಅಷ್ಟು ವೈದಿಕ ಸ್ವಭಾವದವರು ನೋಡಿ, ಆದರೂ ಕ್ರಾಪ್ ಬಿಡಿಸಿಕೊಂಡ ಮಗ ತಂದು ಕೊಟ್ಟ ಕಾಫೀನ ಕುಡಿದೇ ಬಿಟ್ರು! ಎಂದು ಹೇಳಿದಳು. ಹುಡುಗ ಕಟ್ಟುಮಸ್ತಾಗಿದ್ದಾನಂತೆ. ಲಕ್ಷಣವಾಗಿದ್ದಾನಂತೆ. ಜಾತಕ ತೊಗೊಂಡು ಹೋಗಿ ವಿಚಾರಿಸಿಕೊಂಡು ಬರಬಾರದೆ ಅಂದ್ರೆ' ಅಂತ ಹೇಳಿದಳು.

"ನಾಳೇನೇ ಹೋಗ್ತೀನಿ ಕಣೆ" ಅಂತ ಅಂದೆ.

"ಸರಿಹೋಯ್ತು, ನಾಳೆ ಮಂಗಳವಾರ; ಹೋದರೆ ಚೆನ್ನಾಯ್ತು! ಇನ್ನೂ ನಿನ್ನೆ ಗುಂಗು ಇಳಿದ ಹಾಗಿಲ್ಲ" ಅಂದಳು.

"ನಾಡಿದ್ದು ಹೋಗ್ತೀನಿ ಕಣೆ" ಎಂದೆ.

* * * *

ಬುಧವಾರ ಬೆಳಿಗ್ಗೆ ಪಂಚೆಕಚ್ಚೆ ಉಟ್ಟುಕೊಂಡು, ಶಾಲು ಹೊದ್ದುಗೊಂಡು. ಅರಿಶಿನ ಹಚ್ಚಿದ ಜಾತಕ ಹಿಡಕೊಂಡು ಸುಬ್ಬರಾಯ ಶಾಸ್ತ್ರಿಗಳ ಮನೆಗೆ ಹೋದೆ, ವರನೇ ಎದುರುಗೊಂಡ. ಶಾಸ್ತ್ರಿಗಳು ಇದ್ದಾರೆಯೇ' ಎಂದೆ. 'ಇದೀನಿ, ಶಾಮಾ ಶಾಸ್ತ್ರಿ ನಾನೇನೇ' ಎಂದ. 'ಏನು ಬೇಕಾಗಿತ್ತು' ಅಂತ ಕೇಳಿದ ಅವ. ಹೀಗೆ, ಯಜಮಾನರನ್ನ, ಸುಬ್ಬರಾಯಶಾಸ್ತ್ರಿಗಳ ಭೇಟಿಯಾಗುಕ್ಕೆ ಬಂದಿದ್ದೆ' ಎಂದೆ. ನಕ್ಕ ಆ ಹುಡುಗ, 'ತಪ್ಪಾಯ್ತು, ಭ್ರಮರಾಂಬ ಗುಡಿಯ ಪಾರುಪತ್ಯೇಗಾರನ ಮಗ ಡೆಲ್ಲಿಯಲ್ಲಿ ನನ್ನ ಜತೆ ಇದಾನೆ. ನಮ್ಮಪ್ಪನಿಗೆ ಕಾಗದ ಬರೆದಿರ್ತೀನಿ. ಏನಾದರೂ ಕಳಿಸಿದರೆ ತಂದುಕೊಡು ಅಂತ ಹೇಳಿದ್ದ. ನೀವು ಬಂದಾಗ, ಅವನ ತಂದೆ ನೀವು ಅಂತ ಅಂದುಕೊಂಡುಬಿಟ್ಟೆ. ಬನ್ನಿ ಕೂತುಕೊಳ್ಳಿ, ಅಪ್ಪ ದೇವರ ಮನೇಲಿದಾರೆ. ಇಷ್ಟು ಹೊತ್ತಿಗೆ ಪೂಜೆ ಆಗಿರಬಹುದು. ನೀವು ಬಂದಿದ್ದೀರಿ ಅಂತ ಹೇಳ್ತೀನಿ' ಎಂದ. ಶಾಮಾ ಶಾಸ್ತ್ರಿ ಚೊಳನ ಜುಬ್ಬ ಧರಿಸಿದ್ದ. ಗುಂಗುರು ಕೂದಲಿನ ಅವನು ಲಕ್ಷಣವಾಗಿದ್ದ. ಸುಬ್ಬರಾಯ ಶಾಸ್ತ್ರಿಗಳು ಬಂದರು. 'ಓಹೋ ಹೋಹೋ ! ತಾವು ರಂಗರಾಯಲ್ಲವೇ ? ಇಷ್ಟು ದೂರ ಬಡವನ ಮನೆತನಕ ಪಾದ ಬೆಳೆಸಿದ್ದೀರಿ' ಎಂದು ಕೇಳಿದರು. 'ಹೀಗೆ, ವರಾನ್ವೇಷಣೆಗಾಗಿ ಬಂದಿದ್ದೇನೆ. ತಾವು ಈ ಊರಿಗೆ ಬಂದು ನೆಲೆಸಿರುವ ವಿಚಾರ, ಸ್ನೇಹಿತರೊಬ್ಬರು ಹೇಳಿದರು. ತಮ್ಮ ಚಿರಂಜೀವಿಯ ಪರಿಚಯ ಅವರಿಗೆ ಚೆನ್ನಾಗಿದೆಯಂತೆ. ನನ್ನ ಪರಿಚಯ ನಿಮಗೆ ಹೇಗೆ ಆಯಿತು ? ತಿಳೀದಲ್ಲ !' ಎಂದೆ. 'ದೇವಸ್ಥಾನದ ಪ್ರಾಕಾರ ಕಟ್ಟಿಸಿದಾಗ ಒಮ್ಮೊಮ್ಮೆ ನೀವು ಬರ್ತಾಇತ್ತಿಲ್ಲವೇ? ಅರ್ಚಕರು ಹೇಳಿದ್ದರು. ನೀವು ಅದನ್ನು ನಿಮ್ಮ ಸ್ವಂತ ಖರ್ಚಿನಲ್ಲಿ ಕಟ್ಟಿಸ್ತೀರಿ ಅಂತ. ದೇವರು–ದಿಂಡರು ಅಂದರೆ ಭಯ–ಭಕ್ತಿ ಇರೋರನ್ನ ಕಂಡರೆ ನನಗೆ ಬಲು ವಿಶ್ವಾಸ' ಎಂದರು. ಜಾತಕವನ್ನು ಎರಡೂ ಕೈಲಿ ಹಿಡಿದುಕೊಂಡು ಬಗ್ಗಿ ಅವರ ಬೊಗಸೆಗೆ ಹಾಕಿದೆ. ಜಾತಕ ತೆಗೆದು ನೋಡಿದರು. ಬೆರಳ ಮೇಲೆ ಬೆರಳನ್ನ ಏಣಿ ಹತ್ತಿಸಿ ಇಳಿಸಿದರು. 'ಲೇ !' ಅಂತ ಕೂಗಿದರು. ಅಡಿಗೆ ಮನೆಯ ಕಡೆಯಿಂದ ಶಾಸ್ತ್ರಿಗಳ ಧರ್ಮಪತ್ನಿ ಮಡಿಕೋಲು ಹಿಡಿದುಕೊಂಡಿದ್ದವರು ಹಾಗೇ ಧಡ ಧಡ ಅಂತ ಬಂದರು. ಬಲು ಕರಾ ಜೋರಿ ಶಾಸ್ತ್ರಿಗಳು. ಕೂಗು ಹಾಕಿದರೆ ಮನೆಯಾಕೆ ಹೇಗಿದ್ದರೆ ಹಾಗೇ ಬರ್ತಾಳೆ. ಅದಬ್ಬು ಅಂದರೆ ಹೀಗೆ ಅಂತ ಸ್ವಲ್ಪ ಹೊಟ್ಟೆ ಉರಿ ಪಟ್ಟುಕೊಂಡೆ. ಎದ್ದು ನಿಲ್ಲಲು ಹೋದೆ. 'ಪರವಾಗಿಲ್ಲ ಕೂಡಿ ಕೂಡಿ' ಅಂತ ಶಾಸ್ತ್ರಿಗಳೂ ಹೇಳಿದರು, ಆಕೆಯೂ ದನಿಗೂಡಿಸಿದರು. ನನಗೂ ಎದ್ದು ಕೂರೋದು ಸ್ವಲ್ಪ ಸಾಹಸದ ವಿಷಯವೇ! ಕೂತುಕೊಂಡೆ. 'ರಂಗರಾಯರು ನಮ್ಮ ಶಾಮುಗೆ ಮಗಳನ್ನು ಕೊಡಲು ಬಂದಿದ್ದಾರೆ. ಜಾತಕ ತಂದಿದ್ದಾರೆ. ಬಲು

ದಿವ್ಯವಾಗಿ ಕೂಡುತ್ತೆ ಕಣೇ ! ಹೇಳಿ ಮಾಡಿಸಿಟ್ಟ ಹಾಗಿದೆ' ಎಂದರು. 'ಸರಿ ಅಂದ್ರೆ, ದೇವರ ಇಚ್ಛೆ ಹೇಗಿದೆಯೋ ಹಾಗೆ ಆಗಲಿ ಅಂದ್ರೆ' ಎಂದರು ಆಕೆ, 'ದೇವರ ಇಚ್ಛೇನೇ ಜಾತಕ ಕಣೇ ! ನೀನೇನಂತಿ ಅಂತ ಕೇಳುಕ್ಕೆ ಕರೆದೆ ; ಇಂಥ ಚೆನ್ನಾಗಿ ಸರಿಯಾಗಿರೋ ಜಾತಕ ಸಿಗುತ್ತೆ ಅಂತ ಯಾರಾರೂ ಹೇಳಿದ್ದರೆ ನಂಬುತ್ತಲೇ ಇರಲಿಲ್ಲ' ಎಂದರು ಶಾಸ್ತ್ರಿಗಳು. 'ಹುಡುಗನ್ನ ಕೇಳಿ ಅಂದ್ರೆ. ಅವನು ಹುಡುಗೀನ ನೋಡಬೇಡವೇ ? ಹುಡುಗಿ ಅವನ್ನ ಒಪ್ಪಬೇಡವೇ ? ನಮ್ಮದು ವೈದಿಕ ಮನೆ, ಮಡಿ–ಮೈಲಿಗೆ, ಪೂಜೆ–ಪುನಸ್ಕಾರ ಇರೋ ಮನೆಯೋರ ಸಂಬಂಧ ಆದರೆ ಎಲ್ಲರಿಗೂ ಚೆನ್ನಲ್ಲವೇ ಅಂದ್ರೆ' ಎಂದು ಮೆಲ್ಲನೆ ಆದರೂ ಸ್ಪಷ್ಟವಾಗಿ ಆಕೆ ಹೇಳಿದಳು. ಓಹೋ! ಬೆದರಿ ಬಂದಂತೆ ಓಡಿಬಂದರೂ ತನ್ನ ಮಾತನ್ನ ಕೊನೇಲಿ ನಡೆಸಿಕೋತಾಳೆ ಈಕೆ ಎಂದು ನನಗೆ ಮನಸದಟ್ಟಾಯಿತು. ಆ ವೇಳೆಗೆ ಶಾಮು ಒಳಗಿಂದ ಎರಡು ಲೋಟಾ ಕಾಫಿ ಹಿಡಿದುಕೊಂಡು ಬಂದು ಅಪ್ಪನೆದುರಿಗೆ ಒಂದನ್ನೂ, ನನ್ನೆದುರಿಗೆ ಒಂದನ್ನೂ ಇರಿಸಿದ. 'ನಮ್ಮ ಶಾಮು ಬಲು ಜಾಣ. ನಾನು ಮಾಡೋ ಕೆಲಸಾನ ತಾನೇ ಮಾಡಿಕೊಂಡು ಬಂದಿದ್ದಾನೆ' ಎಂದಳು ಅವನ ತಾಯಿ ಹೆಮ್ಮೆಯಿಂದ.

“ಹೇಗೂ, ನನ್ನ ಕಾಫಿ ಮಾಡಿಕೊಳ್ಳುವಾಗ, ಇವರಿಗೂ ಮಾಡಿ ತಂದರೆ ಆಮೇಲೆ ಮಡೀಲಿ ನೀನು ಕಾಫಿ ಮಾಡಿಕೊಂಡು ಕುಡಿಬಹುದಮ್ಮಾ” ಅಂದ ಶಾಮು.

ಓಹೋ ! ಹೀಗೋ ಸ್ಥಿತಿಗತಿ ಮನೇಲಿ ಎಂದುಕೊಂಡೆ ಮನಸ್ಸಿನಲ್ಲೇ.

ತಂದೆ ತಾಯಿ ಶಾಮುನ, ನನ್ನೆದುರೇನಲ್ಲೇ ಕೇಳಿದರು. “ಶನಿವಾರ ನಾನು ದೆಲ್ಲಿಗೆ ಹಿಂತಿರುಗಬೇಕು. ನಾಳೇನೇ ಬೇಕಾದರೆ ಅವರ ಮನೆಗೆ ಹೋಗಿಬರೋಣ” ಎಂದ ಶಾಮು, ತಡಬಡಗುಡದೆ, ಸಾವಧಾನವಾಗಿ.

ಹುಡುಗನಿಗೆ ಸಂಕೋಚ ಪ್ರವೃತ್ತಿ ಇದ್ದ ಹಾಗಿಲ್ಲ. ತನಗೆ ಬೇಕಾದ್ದನ್ನು ಈ ಮನೇಲೂ ಸಾಧಿಸಿಕೊಳ್ಳುತ್ತಾನೆ. ಜಾಣ ಇವ, ಬಾಳೋದರ ಮಾರ್ಗ ತಿಳಿದೋನು ಅಂತ ನನಗೆ ಮನಸದಟ್ಟಾಯಿತು.

'ನಾಳೆ ಮಧ್ಯಾಹ್ನ ನಿಮ್ಮನೆಗೆ ನಾಲ್ಕು ಗಂಟೆ ಹೊತ್ತಿಗೆ ಬಂದರೆ ಆದೀತೇ' ಎಂದು ಸುಬ್ಬರಾಯ ಶಾಸ್ತ್ರಿಗಳು ಕೇಳಿದರು. ಖಂಡಿತ ಆಗಬಹುದು. ಮೂರುವರೆ ಗಂಟೆ ಹೊತ್ತಿಗೆ, ಕಾರನ್ನು ಕಳಿಸ್ತೀನಿ' ಎಂದೆ.

"ಬೇಡ, ತೊಂದರೆ ತೆಗೆದುಕೊಳ್ಳೋದು ಬೇಡ. ನಮ್ಮ ಕಚೇರಿ ಕಾರು ನನ್ನ ಸುಪರ್ದಲ್ಲಿದೆ : ನಾವೇ ಬರ್ತೀವಿ" ಎಂದ ಶಾಮು. ಶಾಮು ಬಲು ಜಾಣ ಅನ್ನಿಸ್ತು.

○ ○ ○ ○

ಮನೆಗೆ ಬಂದೋನೆ ಸುದ್ದಿಯನ್ನೆಲ್ಲಾ ವಿವರವಾಗಿ ಹೇಳಿದೆ. "ನಾಳೆ ಹೊತ್ತಿಗೆ ಮನೆಯಲ್ಲಿ ವೈದೀಕ ಕಳೆ ತುಂಬಬೇಕು. ಕಂಡಲ್ಲಿ ಕೆಮ್ಮಣ್ಣು ಕಾರಣೆ ಹಾಕಿರಬೇಕು. ದೇವರ ಪಟ, ಕೃಷ್ಣಾಜಿನ, ಹುಲಿ ಚರ್ಮ, ಎಲ್ಲವೂ ಅಲ್ಲಲ್ಲೇ ತಾಂಡವವಾಡಬೇಕು. ಗಾಜಿನ ಬಟ್ಟಲು, ಪಿಂಗಾಣಿ ಸಾಮಾನು ಎಲ್ಲವನ್ನೂ ಪೆಠಾರಿಯಲ್ಲಿ ಮುಚ್ಚಿಟ್ಟು, ಬೆಳ್ಳಿ ತಟ್ಟೆ, ಬೆಳ್ಳಿ ಲೋಟಾಗಳನ್ನೇ ಓಡಾಡಿಸಬೇಕು. ತಿಳೀತೇನೇ ? ಅಂದ ಹಾಗೆ ಒಂದು ಜತೆ ಜನಿವಾರಾನೂ ತರಿಸ್ಬಿಡು. ನಾಳೆ ಬೆಳಿಗ್ಗೆ ಹಾಕ್ಕೊಂಡ್ಬಿಡ್ತೀನಿ. ಸಿಲ್ಕು ಜುಬ್ಬ ಹಾಕಿಕೊಂಡಾಗ ಅದು ಕಾಣಿಸಿದರೆ ಚೆನ್ನ" ಎಂದು ಹುಕುಂ ಮಾಡಿದೆ.

ಗುರುವಾರ ಸಾಯಂಕಾಲ ಸರಿಯಾಗಿ ನಾಲ್ಕು ಗಂಟೆ ಹತ್ತು ನಿಮಿಷಕ್ಕೆ ಸಂಸಾರ ಸಮೇತ ಸುಬ್ಬರಾಯ ಶಾಸ್ತ್ರಿಗಳು ಮನೆಗೆ ಬಂದರು. 'ಹತ್ತು ನಿಮಿಷ ಹೊತ್ತಾಯ್ತು. ಅಪ್ಪ ಹೇಳಿದರು, ಒಳ್ಳೆ ಘಳಿಗೇಲಿ ಹೋಗೋಣ ಅಂತ. ನಿಮಗೆ ತೊಂದರೆಯಾಯ್ತೇನೋ' ಎಂದು ಶಾಮು ವಿನಯದಿಂದ ಹೇಳಿದ. ಜಾಣ ಶಾಮು ನಡವಳಿಕಸ್ಥ ಕೂಡ.

ನಮ್ಮ ಮನೆ ದಿವಾನ ಖಾನೆ ಹೇಗಿತ್ತು ಅಂತ. ಥೇಟ್ ಇನ್ನೊಬ್ಬರ ಮನೆ ಇದ್ದ ಹಾಗೆ ನನಗೇನೇ ಕಾಣಿಸ್ತು. ಎಲ್ಲರೂ ರತ್ನಗಂಬಳಿ ಮೇಲೆ ಕೂತುಕೊಂಡೆವು, ದಿವಾನ ಖಾನೆ ಆ ಕಡೆಯಲ್ಲಿ ಚಾಪೆ ಮೇಲೆ ಹೆಂಗಸರೆಲ್ಲರೂ ಕುಳಿತುಕೊಂಡರು. ರಸಾಯನ, ಹುಳಿಯವಲಕ್ಕಿ, ಕಾಫಿ ಎಲ್ಲವನ್ನೂ ಕೊಟ್ಟಾಯ್ತು. ನನ್ನ ಮೂರು ಗಂಡು ಮಕ್ಕಳ ಪರಿಚಯವನ್ನೂ ಮಾಡಿಕೊಟ್ಟಾಯ್ತು, ಒಂದೇ ಹೆಣ್ಣು, ಮೊದಲನೆಯದು ಎಂದು ಹೇಳಿ, ಶಾರೀನೂ ಕರೆಸಿ, ನಮಸ್ಕಾರ ಮಾಡಿಸಿದ್ದಾಯಿತು. ಶಾಸ್ತ್ರಿಗಳ ಹೆಂಡತಿ 'ಹಾಡು ಬರುತ್ತ್ಯೇನಮ್ಮಾ ?' ಎಂದಾಗ, "ಭಾಗ್ಯಾದ ಲಕ್ಷ್ಮಿ ಬಾರಮ್ಮ" ಹಾಡಿದಳು ಶಾರಿ. 'ಎಷ್ಟು ಚೆನ್ನಾಗಿ ಮುದಿ ಮುತ್ತೈದೆಯರ ಹಾಗೆ ಹಾಡ್ತೀಯಲ್ಲೇ ತಾಯಿ, ಭಾಗ್ಯದ ಲಕ್ಷ್ಮಿ ನೀ ಕರೆದರೆ ಬಂದೇಬಿಡ್ತಾಳೆ ಅನ್ನಿಸುತ್ತಮ್ಮ' ಎಂದು ಶಾಸ್ತ್ರಿಗಳ ಹೆಂಡತಿ ಮೆಚ್ಚುಗೆ ಸೂಚಿಸಿದರು,

"ನೀವು ದೆಲ್ಲಿಗೆ ಅಂತರ ವಿಶ್ವವಿದ್ಯಾಲಯದ ಚರ್ಚಾ ಸ್ಪರ್ಧೆಗೆ ಬಂದಿದ್ದಿರಾ ? ಎಲ್ಲೋ ನೋಡಿದ ಹಾಗೆ ಜ್ಞಾಪಕ" ಅಂದ ಶಾಮು.

ಕಾಲು ಬೆರಳಿನ ಮೇಲಿನ ನೋಟವನ್ನು ಎತ್ತದೆ, ಶಾರಿ ಹೇಳಿದಳು. 'ನಮ್ಮ ಕಾಲೇಜಿನ ಪ್ರತಿನಿಧಿಯಾಗಿ ನಾನು ಭಾಗವಹಿಸಿದ್ದೆ' ಎಂದು.

'ಆರು ಗಂಟೆಗೆ ಮುಂಚೆ ಮನೆಗೆ ಹೋಗ್ಬೇಕು' ಎಂದರು ಸುಬ್ಬರಾಯ ಶಾಸ್ತ್ರಿಗಳು. ತೆಂಗಿನಕಾಯಿ ತಾಂಬೂಲ ಇಟ್ಟುಕೊಂಡು ಬರಲು ಶಾರೀನೂ, ಅವರ ತಾಯೀನೂ ಒಳಕ್ಕೆ ಹೋದರು.

ಆಗ ಏನಾಯ್ತು ಗೊತ್ತೆ ?

ನಮ್ಮ ಚಿಕ್ಕ ಹುಡುಗ ಮೂರು ವರ್ಷದೋನು. ಕಿಟ್ಟಿ ಇದಾನಲ್ಲ. ಅವನು ನನ್ನ ಕೊಠಡಿಯಿಂದ ಒಂದು ಶೀಸೇನ ಹಿಡಿದುಕೊಂಡು ಅಪ್ಪಾ ! ಇದನೆಲ್ಲಿಡಲಿ' ಎಂದು ಹೇಳುತ್ತಾ ಬಂದ. ಮೂರು ಕೆನ್ನೆಗಳಲ್ಲೂ ಗುಳಿಬಿದ್ದ ದಪ್ಪನಾದ ಶೀಷೆ. ಅದರ ಮೇಲಿದ್ದ ಕಾಗದವೆಲ್ಲಾ ಹಾಗೇ ಇದೆ. 'ಎಷ್ಟು ಚೆನ್ನಾಗಿದೆ ಈ ಖಾಲಿ ಶೀಷೆ! ನಂಕೊಡಪ್ಪ ಮಗೂ' ಎಂದರು ಭಾವೀ ಬೀಗಿತ್ತಿ. ಕೊಬ್ಬರಿ ಎಣ್ಣೆ ಹಾಕಿಡುಕ್ಕೆ ಬಲು ಚೆನ್ನಾಗಿದೆ ಎಂದರು. ಕಿಟ್ಟಿ ಆ ಶೀಷೇನ ಆಕೆ ಕೈಲಿಟ್ಟ. ಆಕೆ ಕೈಲಿ ಮುತ್ತು ಕೊಡಿಸಿಕೊಂಡ.

ಅಷ್ಟು ಹೊತ್ತಿಗೆ ನನ್ನಾಕೆ ಎಲಡಿಕೆ ತೆಂಗಿನಕಾಯಿ ತಟ್ಟೆ ತೆಗೆದುಕೊಂಡು ಬಂದಳು. ನೋಡಿದಳು, ಶೀಷೆ ಹಿಡಿದಿದ್ದ ಭಾವೀ ಬೀಗಿತ್ತೀನ. ಮಾತಾಡದೆ ಫಲ ತಾಂಬೂಲ, ಕುಂಕುಮ ಅರಿಶಿನ ಕೊಟ್ಟಳು. ಅವರೆಲ್ಲ ಹೊರಟು ಹೋದರು. ಅವರನ್ನು ಬೀಳ್ಕೊಟ್ಟು ಮನೆಯೊಳಕ್ಕೆ ಬಂದೆವು.

ಆಗಲೇ ನೋಡಿ ಎರಡು ಕೊಟ್ಟೆ ಕಿಟ್ಟಿಗೆ. ತಬ್ಬಲಿ ಮುಂಡೇದೇ, ನನ್ನ ರೂಮಿಗೆ ಯಾಕೋ ಹೋದೆ? ಹೋದೋನು ಆ ಶೀಷೇನ ಯಾಕೋ ತಂದೆ ಎಂದು. "ಭಾನುವಾರದ ಗಲಭೇಲಿ ನೀವು ಮೇಜಿನ ಕೆಳಗೆ ಮರೆತಿಟ್ಟರೆ, ಕೈಗೆ ಸಿಗೋ ಹಾಗೆ ಇಟ್ಟರೆ, ಪಾಪ, ಅದೇನ್ಮಾಡುತ್ತೆ ಅಂತ" ಎಂದಳು ಇವಳು.

ಜಾತಕ ಆಗಿತ್ತು, ಶಾರಿ ಹಾಡು ಬೀಗಿತ್ತಿಗೆ ಹಿಡಿಸಿತ್ತು, ಹುಡುಗ ಹುಡುಗೀನ ದಿಲ್ಲೀಲಿ ಕಂಡು ಮೆಚ್ಚಿತ್ತು. ಎಲ್ಲ ತಪ್ಪಿ ಹೋಗುತ್ತಲ್ಲೆ ಈ ಮನೇಲಿ ಇಂಥ ಶೀಷೆ ಇದೆ ಅಂದ್ರು. ಶಾಸ್ತ್ರಿಗಳ ಹೆಂಡತಿಗೇ ಶೀಷೆ ಸುಳು ತಿಳಿದಾಗ ಮದುವೆ ಮಾತಿಗೆ ತುಂಡು ಹಾಕಿದ ಹಾಗೇ ಅಲ್ಲವೇ ಎಂದು ಹಲುಬಾಡಿದೆ.

o o o o

ಆದರೆ ಮದುವೆಯಾಗೇ ಹೋಯ್ತು. ಮೊದಲ ಮೊಮ್ಮಗ ಆದ ಮೇಲೆ ಅಳಿಯನ್ನ ಕೇಳಿದೆ. "ಅವತ್ತು ನಿಮ್ಮ ತಾಯಿ ಕೈಲಿ ಕಿಟ್ಟು ಶೀಷೆ ಇಟ್ಟಾಗ ಮದುವೆ ಬಿದ್ದುಹೋಯ್ತು ಅಂತಿದ್ದೆ. ಏನಾಯ್ತು ಆಮೇಲೆ ಎಂದು. ಅಪ್ಪ ಕೇಳಿದರೆ ಅದೊಂದು ಥರ್ಡ್ಡ ಗಂಧದ ನೀರು. ಕಂಟ್ರಾಕ್ಟರುಗಳು ಇದನ್ನೇ ಅತಿಥಿ ಅಭ್ಯಾಗತರಿಗೆ ಹಚ್ಚೋದು ಅಂತ ನಾನು ಹೇಳೋಣ ಅಂತಿದ್ದೆ ಆದರೆ ನನಗೆ ಮೊದಲೇನೇ ಅಪ್ಪ "ಈಗೀಗ ಗಂಗಾ ಜಲವನ್ನು ತರುಕ್ಕೆ ಇಂಥಾ ಶೀಷೇನ ಉಪಯೋಗಿಸ್ತಾರೆ ಕಣೆ. ಮೊದಲಿನ ಹಾಗೆ, ನಮ್ಮ ಕಾಲದಲ್ಲಿದ್ದ ಹಾಗೆ, ಹಿತ್ತಾಳೆ ಕುಡಿಕೇಲಿ, ಮೇಣ ಮೆತ್ತಿರುತ್ತಲ್ಲ. ಅವರ ಮನೇಲಿ ಯಾರೋ ಕಾಶೀ ಯಾತ್ರೆಗೆ ಹೋಗಿ ಬಂದಿರಬೇಕು" ಎಂದರು. ನಾನು ತೆಪ್ಪಗಾದೆ ಎಂದ.

ಶಾಮು ಬಲು ಜಾಣ. ಅವರಪ್ಪ ಅವನಿಗಿಂತ ಜಾಣ !



"ಯಾಕ್ಲಾ ಮಗಾ ! ಸಾಲಿ ಉಡ್ರು ಮುಷ್ಕರ ನಿಂತ್ರೆ ನೀನ್ಯಾಕ್ ಮನೀಗ್ಬಂದೀ ? ಅವ್ನೆಲ್ಲಾ ಈಗ್ನಿಂದ್ ಕಲಿತ್ರೆ ತಾನೆ ಮುಂದೆ ಪ್ಯಾಸು !"

ಅಲರ್ಜಿ

— ಶಾಂತಾ ರಘು

ಅಲರ್ಜಿ ! ಇದನ್ನು ಬಲ್ಲದವರಾರು ? ಇದು ಯಾರನ್ನು ಬಿಟ್ಟೀತು ? ಅರಮನೇಲಿರೋ ಅರಸನಾಗಲಿ, ಅತಿರಥ ಮಹಾರಥರೇ ಆಗಲಿ ಅಲರ್ಜಿಗೆ ಅಂಜಲೇ ಬೇಕು. ಆಕಾಶ ಮಾರ್ಗವಾಗಿ ತಪ್ಪಿಸಿಕೊಂಡರೂ, ಅತಃ ಪಾತಾಳದಲ್ಲೇ ಅವಿತಿಟ್ಟು ಕೊಂಡರೂ ಅಲರ್ಜಿಯಿಂದ ತಪ್ಪಿಸಿಕೊಳ್ಳಲಾರಿರಿ. ಪ್ರಪಂಚದಲ್ಲಿ ಸಾವಿರಾರು ನಾಮಾವಳಿಗಳಿಂದ ರಾರಾಜಿಸುತ್ತಿರುವ ರೋಗಗಳಲ್ಲಿ, ಅಲರ್ಜಿಯಷ್ಟು Colourful ಯಾವುದೂ ಇಲ್ಲವೆಂದೇ ನನ್ನ ವಾದ. ಅದು ಯಾರಿಗೆ, ಯಾವಾಗ, ಯಾಕೆ, ಎಷ್ಟು ಸಲ ಬರುತ್ತೆಂದು ಆ ಸರ್ವೇಶ್ವರನೂ ಹೇಳಲಾರ.

ನಮ್ಮ ಸ್ನೇಹಿತರೊಬ್ಬರ ಮಾತಿನಲ್ಲಿ "ಅಟ್ಟಟ್ಟಿಕೊಂಡೇ ಬಂದು ಅಡರಿ ಕೊಳ್ಳೋ ಅನಿಷ್ಟ ಅತಿಥಿ ಅಲರ್ಜಿ". ಅವರಿಗೆ ಹೊಟ್ಟೆ ಉರಿಯದೇ ಏನು ಮಾಡೀತು ? ಜಟ್ಟಿ ಪೈಲ್ವಾನರ ತರಹ ದಿನಕ್ಕೆ 6 ಮೊಟ್ಟೆ ತಿಂದು, 1½ ಲೀಟರ್ ಹಾಲು ಕುಡಿಯುವವರು ಅವರು. ಹೀಗೇ ಸುಖವಾಗಿ ತಮ್ಮ ಪಾಡಿಗೆ ತಾವು ಇದ್ದ ರಾಯರಿಗೆ, ಇದ್ದಕ್ಕಿದ್ದ ಹಾಗೆ One fine day ಮೈಯೆಲ್ಲಾ ದದ್ದು, ಜ್ವರ, ಮೂಗಿನಲ್ಲಿ ಜಲಪಾತ. ಸುಮಾರು Investigation ಆದಮೇಲೆ ಡಾಕ್ಟರ Verdict—ರಾಯರಿಗೆ Protein allergy. ಮೊಟ್ಟೆ, ಹಾಲು, ಆಲೂಗಡ್ಡೆ, ಊಹೂಂ. ಹೊಟ್ಟೆ ಉರಿಯದೆ ಇದ್ದೀತೆ ? 55 ವರ್ಷ ಇಲ್ಲದಿದ್ದ ಅಲರ್ಜಿ ಈಗೇಕೆ ಬಂತು ?

ನಮ್ಮ ಸಂಗೀತದ ಗುರುಗಳ ಮಗುವನ್ನು ನಾಲ್ಕು ವರ್ಷಕ್ಕೆ K. G.ಗೆ ಸೇರಿಸಿದರು. ಸ್ವಲ್ಪ ದಿನಗಳಾದ ಮೇಲೆ ಸಂಜೆ ಮನೆಗೆ ಹಿಂತಿರುಗುತ್ತಿದ್ದ ಮಗುವಿನ ತುಟಿ, ಮೂಗು ಎಲ್ಲಾ ಊದಿಕೊಂಡು ಮಿರಮಿರನೆ ಮಿಂಚುತ್ತಿದ್ದುದನ್ನು ತಾಯಿ ಗಮನಿಸಿದರು. ರಜೆಯ ದಿನಗಳಲ್ಲಿ Normal. ಕಡೆಗೆ ಕಂಡುಹಿಡಿದ ಕಳ್ಳ ಕಡಲೆ ಕಾಯಿ ! ಮಗು ದಿನಾ ಶಾಲೆಯಲ್ಲಿ ಪುಟ್ಟ ಪೊಟ್ಟಣ ಕಡಲೆ ಬೀಜ ತಿನ್ನುತ್ತಿತ್ತು ! ಹುಡುಗ ಬೆಳೆದರೂ ಕಡಲೆಕಾಯಿ ಎಣ್ಣೆಯ ಯಾವ ಪದಾರ್ಥವೂ ಆಗದು. Family doctor ಹೇಳಿದರಂತೆ– "ಹಾಲಿನಲ್ಲಿ ದಿನಾ ಒಂದು ತೊಟ್ಟು ಕಡಲೆ ಕಾಯಿ ಎಣ್ಣೆ ಹಾಕಿ ಕೊಡಿ. Immunity ಬರಬಹುದು" ಎಂದು !

ನನ್ನ ಆಪ್ತ ಸ್ನೇಹಿತೆ ವಿಮಲಳ ನಳಪಾಕ ಪ್ರಸಿದ್ಧ. ಆದರೇನು ? ಮನೆ ಮಂದಿಗೂ, ಬಂದವರಿಗೂ ಬೇಜಾರಿಲ್ಲದೆ ಮಾಡಿ ಬಡಿಸುವ ವಿಮಲಾಗೆ, ಅವರಿಗೆ ಪಂಚಪ್ರಾಣವಾದ ಮಟನ್ನು ಅಲರ್ಜಿ. ಅಕಸ್ಮಾತ್ ಅಪ್ಪಿತಪ್ಪಿ ಬಾಯಿಗೆ ಮಟನ್ ಸೋಂಕಿತೋ, ತೀರಿತು. ಮೈಯೆಲ್ಲಾ ದದ್ದು, 104° ಜ್ವರ, ಅಲ್ಲೋಲಕಲ್ಲೋಲ. ಹೀಗೇ ತುಂಬ ಜಾಗರೂಕತೆಯಿಂದ ಇದ್ದ ವಿಮಲಾಗೆ, ಇದ್ದಕ್ಕಿದ್ದ ಹಾಗೆ ಭಯಂಕರ ಕೆಮ್ಮು ಶುರುವಾಯಿತು. ನೆಗಡಿ ಇಲ್ಲ, ಜ್ವರವಿಲ್ಲ, ಎಡೆಬಿಡದ ಕೆಮ್ಮು. ಯಜಮಾನರು ಔಷಧಿ ಕೊಟ್ಟು ಕೊಟ್ಟು ಸುಸ್ತಾದರು. X-ray, Check-up ಎಲ್ಲಾ ಆಯಿತು. All clear. "ಮಹರಾಯಿತಿ, ಅಮ್ಮನ ಮನೆಗೆ ಒಂದು Change ಗೆ ಹೋಗು" ಎಂದು Wilson Gardenನಲ್ಲಿದ್ದ ತಾಯಿ ಮನೆಗೆ ಕಳಿಸಿಕೊಟ್ಟರು. ಏನಾಶ್ಚರ್ಯ ! ಅಮ್ಮನ ಮನೆಯಲ್ಲಿ ಕೆಮ್ಮು ಸುಮ್ಮನಾಯಿತು ! ಮತ್ತೆ ಗಂಡನ ಮನೆಗೆ ಬಂದರೆ ಗುಂಡಿಗೆ ಹಾರುವ ಕೆಮ್ಮು. ಕೊನೆಗೆ ಎಲ್ಲ ಸೇರಿ Detective ಕೆಲಸ ಮಾಡಿದ್ದಾಯಿತು. ಆಹಾ ! ವಿಮಲನ ಮನೆಗೆ ಒಂದು ತಿಂಗಳಿಂದ ಹೊಸದಾಗಿ ಬಂದಿದ್ದ ಅತಿಥಿ– ಬೆಕ್ಕಿನ ಮರಿ Fluffy ! Kitten ನ್ನೇ Culprit. ಅದರ ಸೂಕ್ಷ್ಮವಾದ ಕೂದಲು ವಿಮಲಾಗೆ ಒಗ್ಗದು. Cat allergy ! Fluffy ಗೆ ತಕ್ಷಣ ವರ್ಗಾವಣೆಯಾಯಿತು.

ನಮ್ಮ ತಾಯಿಗೆ ನಮಗೆಲ್ಲ ಪ್ರಿಯವಾದ ಬದನೆಕಾಯಿ ಅಲರ್ಜಿ. ಬದನೆಕಾಯಿ ಹುಳಿಯಲ್ಲಿ ಅದ್ದಿದ ಸೌಟಿನಿಂದ ಅವರಿಗೆ ಪಲ್ಯ ಬಡಿಸಿದರೂ ಸಾಕು; 5 ನಿಮಿಷದಲ್ಲಿ, 6½ ಶ್ರುತಿಯಲ್ಲಿ ವಯಲಿನ್ ತರಹ ಅಸ್ತಮಾ ಎಳೆಯಲು ಶುರುವಾಗತ್ತೆ. ಬದನೆಕಾಯಿಗೆ ಬಯ್ಗಳ ಸುರಿಮಳೆಯಾಗತ್ತೆ.

ಅವರ ಅಕ್ಕ–ಅಂದರೆ ನಮ್ಮ ದೊಡ್ಡಮ್ಮನಿಗೆ—ಎಳ್ಳು ಅಂದರೆ ಎಂಟು ಗಾವುದ ದೂರದಲ್ಲಿರಬೇಕು. ಮೂರನೇ ಮನೆಯಲ್ಲಿ ಎಳ್ಳು ಕುಟ್ಟುತ್ತಿದ್ದರೆ ಇಲ್ಲಿ ಇವರಿಗೆ ಮೂಗು ಕೆಂಪೇರಿ, ಮುನ್ನೂರು ಸೀನು ಸೀನುತ್ತಾರೆ. ಅವರ ಮಗಳ ಮದುವೆಯಲ್ಲಿ ಪುಳಿಯೋಗರೆಗೆ ಎಳ್ಳು ಕುಟ್ಟಿದ್ದ ಒರಳಿನಲ್ಲೇ ಅಕಸ್ಮಾತ್ ಸಾಂಬಾರಿಗೂ ಪುಡಿ ಕುಟ್ಟಿಬಿಟ್ಟಿದ್ದರು. ತೊಗೊಳ್ಳಿ, ಊಟ ಮುಗಿದ ಕಾಲು ಗಂಟೆಯಲ್ಲಿ ದೊಡ್ಡಮ್ಮ ದೊಡ್ಡ ಉಸಿರು ಬಿಡುತ್ತಾ, ತೇಲುಗಣ್ಣು, ಮೇಲುಗಣ್ಣು ಮಾಡಿ ಮೂರ್ಛೆ ಹೋದರು. ಡಾಕ್ಟರ್ ಬಂದು ಮೂರು ಸೂಜಿ ಹಾಕಬೇಕಾಯಿತು.

ಆಡಂಬರವಾಗಿ ಮದುವೆ ರಿಸೆಪ್ಷನ್ ನಡೆಯುತ್ತಿತ್ತು. ಆತ್ಮೀಯ ಸ್ನೇಹಿತರೊಬ್ಬರು, ವಧುವಿಗೆ ತಮ್ಮ ಮನೆಯಲ್ಲೇ ಬಿಟ್ಟಿದ್ದ ತಾಜಾ ರೋಜಾ ಹೂಗಳ ದೊಡ್ಡ ಗೊಂಚಲನ್ನು ಕೊಟ್ಟರು. ಮುಗುಳ್ನಗುತ್ತ ಮದುಮಗಳು ಗೊಂಚಲನ್ನು

ಮೂಸಿದಳು. ಅಷ್ಟೇ. ಪಕ್ಕದಲ್ಲಿದ್ದ ಮದುಮಗನೇ ಬೆಚ್ಚಿಬೀಳುವಂತೆ ಒಂದಾದ-ಮೇಲೊಂದು ಸೀನುಗಳು ! ಪಾಪ, ಅವಳಿಗೆ ಗುಲಾಬಿ ಅಲರ್ಜಿ !

ಹುಟ್ಟಿದ ಕೂಸಿಗೆ ಹಾಲೇ ಅಲರ್ಜಿ ಕೇಳಿದ್ದೀರಾ ? ಆ ಮಗು ಬರೇ ಹಣ್ಣಿನ ರಸ, ಇತರ Alternatives ನಲ್ಲೇ ಬೆಳೆಯಬೇಕು.

ಎಷ್ಟು ತರಹ ಅಲರ್ಜಿಗಳು ! ಟೊಮೇಟೋ, ಕಾಫಿ, ಮೀನು, ತರಕಾರಿ, ಪೌಡರ್– ಯಾರಿಗೆ ಯಾವುದು ಅಲರ್ಜಿಯೋ ! 'ರಸ್ತೆಯಲ್ಲಿ ನಡೆದರೆ ಧೂಳು, ಪೆಟ್ರೋಲಿನ ಹೊಗೆ ಅಲರ್ಜಿ. ಕೆಲವರಿಗೆ ಊದುಗಡ್ಡಿಯ ಸುವಾಸನೆ ಸೋಂಕಿದರೆ ತೀರಿತು ಅಲೋಪತಿ, ಆಯುರ್ವೇದ ಯಾವುದೂ ಸಾಲದೆ. ಆಂಬುಲೆನ್ಸ್ ತರಿಸಿ ನೆಟ್ಟಗೆ ಆಸ್ಪತ್ರೆಗೇ ಸಾಗಿಸಬೇಕು. ಕೆಲವರು ಗೃಹಿಣಿಯರು ಮೂಗಿಗೆ ಟವಲ್ ಹಿಡಿದುಕೊಂಡು ಕಸ ಗುಡಿಸುತ್ತಾರೆ. Dust allergy. ಕೆಲವರು Gloves ಹಾಕಿಕೊಂಡು ಬಟ್ಟೆ ಒಗೆಯುತ್ತಾರೆ. Soap ಅಲರ್ಜಿ.

ಇಷ್ಟೆಲ್ಲ ಆದಿಯಿಂದ ಅಂತ್ಯದವರೆಗೆ ಅಲರ್ಜಿಯ ಆಲೋಚನೆ ಮಾಡುತ್ತಿದ್ದ ನನಗೆ ಅನಿರ್ವಚನೀಯ ಆನಂದ ಆಗುತ್ತಾ ಇತ್ತು. ದೇವರ ದಯೆ, ಈ ಅಧ್ವಾನದ ಅಲರ್ಜಿ ಯಾವುದೂ ನನಗಿಲ್ಲ ಸದ್ಯ. ಇದೇ ಮಾತನ್ನು ನಮ್ಮ ಲೇಡೀಸ್ ಕ್ಲಬ್‌ನಲ್ಲಿ ಹೇಳಿದರೆ ಕೆಲವರಂತೂ ಬಲು ದೊಡ್ಡ ಅನ್ಯಾಯವಾದಂತೆ ನನ್ನನ್ನು ನೋಡಿದರು. ಅವರ ದೃಷ್ಟಿಯಲ್ಲಿ ನಾನು ಅಪರಾಧಿ. ಛೆ, ಛೆ, ಒಂದೂ ಅಲರ್ಜಿ ಇಲ್ಲಾಂದ್ರೆ ಏನಿದೆ ದೊಡ್ಡಸ್ತಿಕೆ ಅನ್ನೋ ಹಾಗೆ. ಬಾಲ ಹೋದ ನರಿಯ ಕಥೆ ಗೊತ್ತು ತಾನೆ ? !!

ಈ ಅಲರ್ಜಿ ಪುರಾಣ ಮುಕ್ತಾಯ ಮಾಡುತ್ತಿದ್ದ ಹಾಗೆ ಬಾಗಿಲು ಸದ್ದಾಯಿತು. ಕಾಲೇಜಿನಿಂದ ನನ್ನ ಮಗ ಎರಡು ಗಂಟೆ ಮುಂಚೆಯೇ ಹಿಂತಿರುಗಿದ್ದ. "ಯಾಕಪ್ಪ ? Chemistry ಕ್ಲಾಸು ಕಟ್ಟ್ ?" ಅಂತ ಕೇಳಿದೆ.

“ಹೋಗಮ್ಮ, ಆ Lecturer ಕಂಡ್ರೇ ನಮಗೆಲ್ಲಾ ಅಲರ್ಜಿ !” ಅಂದ ಮಗರಾಯ !

ಖ್ಯಾತನಾಮರ ಬೆನ್ನಟ್ಟಿ . . . .

— ಆರ್. ಕೆ. ಲಕ್ಷ್ಮಣ್

ಲಂಡನ್‌ಗೆ ಬಂದು ಹ್ಯಾಂಪ್‌ಸ್ಟೀಡ್ ಹೀತ್ ಪ್ರಾಂತದಲ್ಲಿ ಒಂದು ಸಣ್ಣ ಅಡುಗೆ ಮನೆ ಇರುವ ಕೋಣೆ ಹುಡುಕಿ ಅಲ್ಲಿ ನೆಲೆ ನಿಂತ ಹಾಗಾದಾಗ ನಾನು ಗ್ರಹಾಂ ಗ್ರೀನ್ ಅವರಿಗೆ ಫೋನ್ ಹಚ್ಚಿದೆ. ಅವರು ನನ್ನ ಅಣ್ಣ ನಾರಾಯಣರ ಗೆಳೆಯರು. ಭಾರತದಿಂದ ನಾನು ತಂದಿದ್ದ ಹೆಸರುಗಳ ಪಟ್ಟಿಯಲ್ಲಿ ಅವರದೇ ಮೊದಲನೆಯದಾಗಿತ್ತು. ನಮ್ಮ ಪತ್ರಿಕೆಯವರು ಕೆಲ ಜನಪ್ರಿಯ ರಾಜಕಾರಣಿಗಳು, ಸಾಹಿತಿಗಳನ್ನು ಭೇಟಿಮಾಡಿ, ಅವರ ವ್ಯಂಗ್ಯಭಾವಚಿತ್ರ (Caricatures)ಗಳನ್ನು ಕಳುಹಿಸಬೇಕೆಂದು ನನ್ನನ್ನು ಇಂಗ್ಲೆಂಡ್‌ಗೆ ರವಾನಿಸಿದ್ದರು. ಫೋನ್ ಎತ್ತಿದ ಗ್ರಹಾಂ ಗ್ರೀನ್ ಅವರ ಕಾರ್ಯದರ್ಶಿ 'ಅವರು ದಕ್ಷಿಣ ಅಮೆರಿಕವೋ, ಎಲ್ಲೋ ಹೋಗಿದ್ದಾರೆ' ಎಂಬ ಸುದ್ದಿ ಮುಟ್ಟಿಸಿ, ಏಪ್ರಿಲ್‌ನಲ್ಲಿ ವಾಪಸಾಗುತ್ತಾರೆಂದು ಹೇಳಿದರು ! ಏಪ್ರಿಲ್ ಎಂದರೆ ಇನ್ನೂ ಎರಡು ತಿಂಗಳ ಕಾಲ.

ಮುಂದಿನ ಸರದಿ ನನ್ನ ಸ್ನೇಹಿತರಾದ ಡೇವಿಡ್ ಲೋ ಅವರದು. ಅವರನ್ನು ಸಂಪರ್ಕಿಸೋಣವೆಂದು 'ಈವ್ನಿಂಗ್ ಸ್ಟ್ಯಾಂಡರ್ಡ್' ಕಛೇರಿಗೆ ಫೋನ್ ಮಾಡಿದೆ. ಅವರಿಗೂ ನನ್ನ ಪಟ್ಟಿಯಲ್ಲಿ ಪ್ರಮುಖ ಸ್ಥಾನವಿತ್ತು. ಫೋನ್ ಮಾಡಿದಾಗ ಅವರು ತಮ್ಮ ಹಳ್ಳಿಯ ಮನೆಯಲ್ಲಿರುತ್ತಾರೆಂದೂ, ಅಪರೂಪಕ್ಕೊಮ್ಮೆ ಮಾತ್ರ ಲಂಡನ್‌ಗೆ ಬರುತ್ತಾರೆಂದೂ ತಿಳಿದು ಬಂತು. ನಾನು ಅವರಿಗೆ ಕೂಡಲೇ ಒಂದು ಪತ್ರ ಬರೆದು ಹಾಕಿದೆ. ಅಲ್ಲಿಂದ ಬೇಗನೇ ಉತ್ತರವೂ ಬಂತು. ಅವರು ಲಂಡನ್‌ಗೆ ಜೂನ್ ತಿಂಗಳ ಮಧ್ಯದಲ್ಲಿ ಬರುವುದಾಗಿಯೂ, ಜೂನ್ 17 ರ ಸಂಜೆ ನಾಲ್ಕು ಗಂಟೆಗೆ ಇಂತಿಂಥ ವಿಳಾಸಕ್ಕೆ ಚಹಾಪಾನಕ್ಕೆ ಬರಲು ಸಾಧ್ಯವೇ ? ಎಂಬುದು ಆ ಪತ್ರದ ಮಜಕೂರು. ನಾನು ಸ್ವಲ್ಪ ನಿರಾಶೆಯಿಂದಲೇ ಜೆ.ಬಿ. ಪ್ರೀಸ್ಟ್ಲಿ ಅವರನ್ನು ಸಂಪರ್ಕಿಸ ಲೆತ್ನಿಸಿದಾಗ ಬಂದ ಉತ್ತರ– "ಅವರು ಐಲ್ ಆಫ್ ವ್ಯೂನ್‌ನಲ್ಲಿರುತ್ತಾರೆ. ಲಂಡನ್‌ಗೆ ಬಂದಾಗ ಖಂಡಿತ ನಿಮ್ಮನ್ನು ಸಂಪರ್ಕಿಸುತ್ತಾರೆ".

ಯಾರೂ ಲಂಡನ್‌ನಲ್ಲಿ ವಾಸಿಸುತ್ತಿದ್ದಂತಿರಲಿಲ್ಲ ! ಇಬ್ಬರನ್ನು ಭೇಟಿಯಾಗುವ ಸಂದರ್ಭಗಳ ನಡುವೆ ಇದ್ದ ಖಾಲಿ ಸಮಯದ ಬಗ್ಗೆ ಆಲೋಚಿಸಿದಾಗ ನನ್ನ ಹೃದಯ ಕುಸಿಯಿತು. ಇದು ಈ ರೀತಿಯೇ ಮುಂದುವರೆದರೆ ನಾನು ಲಂಡನ್‌ನಲ್ಲಿ ಸಾಕಷ್ಟು ಕಾಲ ಇರಬೇಕಾದೀತೆಂದು ನನಗೆ ಅನಿಸತೊಡಗಿತ್ತು !

ಈ ಅವಕಾಶದಲ್ಲಿ ನನಗೆ ಫ್ಲೀಟ್ ಸ್ಟ್ರೀಟ್‌ನಲ್ಲಿ ಅನೇಕ ಗೆಳೆಯರನ್ನು ಸಂಪಾದಿಸಿಕೊಳ್ಳಲು ಸಾಧ್ಯವಾಯಿತು. ವಿಕಿ, ಇಲಿಂಗ್‌ವರ್ಥ್, ಜಾಸ್‌ರಂತಹ ವ್ಯಂಗ್ಯಚಿತ್ರಗಾರರು ನನ್ನ ಸ್ನೇಹಿತರಾದರು. ನಾವು ಹೆಚ್ಚು ಕಡಿಮೆ ಪ್ರತಿ ದಿನವೂ ಲೇಖಕರ, ಕಲಾವಿದರ ಕ್ಲಬ್‌ನಲ್ಲಿ ಭೇಟಿಯಾಗುತ್ತಿದ್ದೆವು. ಈಗ ಅವರೆಲ್ಲಾ ತೀರಿಕೊಂಡಿದ್ದಾರೆ. ಒಬ್ಬಾತ ಐದನೆಯ ಮಹಡಿಯ ಕಿಟಕಿಯಿಂದ ಹಾರಿ ಪ್ರಾಣ ಕಳೆದುಕೊಂಡ. ಮತ್ತೊಬ್ಬ ನಿದ್ರೆಗುಳಿಗೆಗಳನ್ನು ನುಂಗಿದ. ಮೂರನೆಯವ ಮಾತ್ರ ವಯಸ್ಸಾದ್ದರಿಂದ ತೀರಿಕೊಂಡ.

ನನಗೇನೋ ಇಲ್ಲಿ ಮಜವಾಗಿತ್ತು. ಆದರೆ ನನ್ನ ಇಂಗ್ಲೆಂಡ್ ಪ್ರವಾಸದ ಉದ್ದೇಶ ನೆನಪಾದಾಗ ಮಾತ್ರ ಒಂದು ಅಪರಾಧಿ ಭಾವ ಕಾಡುತ್ತಿತ್ತು.

ಆದರೆ ಬೇಗನೇ ನನ್ನ ಅದೃಷ್ಟವೂ ಒಲಿಯಿತು. ಯಾರ್ಕ್‌ಷೈರ್‌ನ ಸ್ಕಾರ್‌ಬರೋದಲ್ಲಿ ಲೇಬರ್ ಪಕ್ಷದ ಸಮ್ಮೇಳನಕ್ಕೆ ನನಗೆ ಆಹ್ವಾನ ಬಂದಿತು. ನನ್ನ ಸ್ಕೆಚಿಂಗ್ ಪ್ಯಾಡ್ ತೆಗೆದು ನಾನಲ್ಲಿಗೆ ಹೊರಟೆ. ಸಮ್ಮೇಳನಕ್ಕೆ ಬಂದಿದ್ದವರನ್ನು ಇಳಿಸಿದ್ದ ಹೋಟೇಲಿನಲ್ಲೇ ನನಗೂ ವಸತಿಯ ಏರ್ಪಾಟಾಗಿತ್ತು. ಬೆಳಗಿನ ತಿಂಡಿಯ ಸಮಯದಲ್ಲಿ ಯಾರಿಗೂ ಅರಿವಿಲ್ಲದಂತೆಯೇ ನಾನು ಅನೇಕ ಮುಖಚಹರೆಗಳನ್ನು—ಅದೂ ಅವರು ಯಾವ ಚಿಂತೆಯೂ ಇಲ್ಲದೆ ಹರಟೆಕೊಚ್ಚುತ್ತಿರುವಾಗ—ಅಭ್ಯಾಸಮಾಡಲು ಸಾಧ್ಯವಾಯಿತು. ರಾತ್ರಿಯ ಊಟದ ಸಮಯದಲ್ಲಿ, ಬಾರ್‌ನಲ್ಲಿ, ಹಾಗೂ ಸಮ್ಮೇಳನದ ಚರ್ಚೆಯ ಸಮಯದಲ್ಲಿಯೂ ನಾನು ಅವರನ್ನು ಅಭ್ಯಾಸ ಮಾಡುತ್ತಿದ್ದೆ. ಹೀಗೆ ಒಂದೇ ಬಾರಿಗೆ ನಾನು ರಾಜಕೀಯ ನಾಯಕರಾದ ಅಟ್ಲೀ, ಬೀವನ್, ಗೇಟ್ಸ್ಕೆಲ್, ವಿಲ್ಸನ್, ಮಾರಿಸನ್‌ರ ವ್ಯಂಗ್ಯ ಭಾವಚಿತ್ರಗಳನ್ನು ಬರೆದು ಪತ್ರಿಕೆಗೆ ಕಳಿಸಿದೆ.

ಹಾಗೆಯೇ ಬ್ಲ್ಯಾಕ್‌ಪೂಲ್‌ನಲ್ಲಿ ನಡೆದ ಮತ್ತೊಂದು ಸಮ್ಮೇಳನದಲ್ಲಿ ಕೆಲ ಕನ್ಸರ್ವೇಟಿವ್ ಪಕ್ಷದ ನಾಯಕರನ್ನೂ ಸಮೀಪದಿಂದ ನೋಡುವ ಅವಕಾಶವಾಯಿತು. ಅದರಲ್ಲೂ ಮುಖ್ಯವಾಗಿ ಚರ್ಚಿಲ್ ಮತ್ತು ಈಡನ್. ನನ್ನ ತೊಂದರೆ ಉದ್ಭವಿಸಿದ್ದೆಲ್ಲಾ ರಾಜಕೀಯೇತರ ಖ್ಯಾತನಾಮರ ಬಗ್ಗೆಯೇ. ಈ ಜನರಲ್ಲಿ ಒಬ್ಬರನ್ನೂ ಭೇಟಿಯಾಗದೇ ದಿನಗಳುರುಳಿ ವಾರಗಳಾಗಿ, ತಿಂಗಳುಗಳೂ ಆಗಿ ಬಿಟ್ಟಿದ್ದುವು. ನನ್ನ ಆತ್ಮಕ್ಷೋಭೆಯನ್ನು ಗೆಲ್ಲಲು "ವಿದೇಶದಲ್ಲಿ ನಮ್ಮ ವ್ಯಂಗ್ಯಚಿತ್ರಗಾರ" ಎಂಬ ಹೊಸ ಸರಣಿಯನ್ನು ಪ್ರಾರಂಭಿಸಿ, ಬ್ರಿಟಿಷರ ಜೀವನ ಶೈಲಿಯ ಬಗ್ಗೆ ಕೆಲ ವ್ಯಂಗ್ಯೋಕ್ತಿಗಳನ್ನು ಟೈಮ್ಸ್‌ಗೆ ಕಳುಹಿಸತೊಡಗಿದೆ. ನಮ್ಮ ಕಾರ್ಯಾಲಯದವರಿಗೇನೋ ನನ್ನ ಬಗ್ಗೆ ಸಮಾಧಾನವಿತ್ತಾಗಲೀ ನನಗೆ ಸಮಾಧಾನವಿರಲಿಲ್ಲ ! ನನ್ನ ಉದ್ದೇಶ ಈ ಖ್ಯಾತನಾಮರನ್ನು ಬುಟ್ಟಿಗೆ ಹಾಕಿಕೊಳ್ಳುವುದಾಗಿತ್ತು.

ಒಂದು ದಿನ ನನ್ನ ಚಡಪಡಿಕೆಯು ಉತ್ತುಂಗದಲ್ಲಿ ಹುಂಬ ಧೈರ್ಯ ಮಾಡಿ **ಫೇಬರ್ ಅಂಡ್ ಫೇಬರ್** ಕಛೇರಿಯಲ್ಲಿನ ಟಿ. ಎಸ್. ಎಲಿಯಟ್ಟರಿಗೆ ಫೋನ್ ಮಾಡಿದೆ. ಬೂದು ಬಣ್ಣದ ಉಡುಪು ಧರಿಸಿರುವ ಮಧ್ಯವಯಸ್ಕ ಕಾರ್ಯದರ್ಶಿನಿ ಎಂದು ನಾನು ಊಹಿಸಿದ ಆಕೆ ಅತಿ ವಿನಯದಿಂದ ಉತ್ತರಿಸಿದಳು– "ಮಿಸ್ಟರ್ ಎಲಿಯಟ್ ದೂರವಾಣಿ ಕರೆಗಳಿಗೆ ಉತ್ತರಿಸುವುದಿಲ್ಲ. ಸಂದರ್ಶಕರನ್ನು ನೋಡುವುದಿಲ್ಲ, ಸಂದರ್ಶನಗಳನ್ನೂ ನೀಡುವುದಿಲ್ಲ. ಆದ್ದರಿಂದ ದಯವಿಟ್ಟು ಕ್ಷಮಿಸಿ!"

ಕೆಲ ದಿನಗಳ ಅನಂತರ ಪ್ರಿಸ್ಟ್ಲಿಯವರಿಂದ ಪತ್ರ ಬಂತು. ಅವರು ನನ್ನನ್ನು ಚಹಾಪಾನಕ್ಕೆ ಆಹ್ವಾನಿಸಿದ್ದರು. ನನಗೆ ಬಹಳ ಖುಷಿಯಾಯಿತು ಅವರನ್ನು ಭೇಟಿಯಾಗಲು ನಾನು ಹೆಚ್ಚು ದೂರವೇನೂ ಹೋಗಬೇಕಿರಲಿಲ್ಲ. ನಮ್ಮ ಲಂಡನ್ ಕಾರ್ಯಾಲಯದ ಪಕ್ಕದಲ್ಲೇ ಇದ್ದ ಪಿಕಾಡಲಿಯ ಅಲ್ಬನಿ ಕೋರ್ಟ್ಸನಲ್ಲಿ ಅವರು ಇದ್ದರು. ಲಾರ್ಡ್ ಬೈರನ್ ಕೂಡಾ ಅದೇ ಜಾಗದಲ್ಲಿದ್ದುದರಿಂದ ಅಲ್ಬನಿ ಕೋರ್ಟ್ ನನಗೆ ವಿಶೇಷ ಆಕರ್ಷಣೆಯ ಸ್ಥಳವಾಯಿತು.

ಪ್ರೀಸ್ಟ್ಲಿ ಚೆಂಡಿನಂತೆ ಪುಟಿಯುತ್ತಾ ಹಜಾರದ ಸುತ್ತಲೂ ತಮ್ಮ ಮಹಾ ಕಾಯವನ್ನು ಇಷ್ಟ ಬಂದ ರೀತಿಯಲ್ಲಿ ಆಶ್ಚರ್ಯಕರವಾಗಿ ಬಗ್ಗಿಸುತ್ತಾ ಲವಲವಿಕೆಯಿಂದಿದ್ದರು. ನಾನು ಅವರ ಚಿತ್ರ ಬರೆಯುವುದಕ್ಕೆ ಮೊದಲೇ ಅವರು ಒಂದು ಸೂಚನೆಯನ್ನೂ ಕೊಟ್ಟುಬಿಟ್ಟರು– ಮೂಲತಃ ಅವರು ಹಾಸ್ಯ ಲೇಖಕರಾದ್ದರಿಂದ ಅವರ ಚಿತ್ರ ತಮ್ಮಂತೆ ಗಂಭೀರವಾಗಿ ಕಾಣಬಾರದೆಂಬುದು ಅವರ ಅಪೇಕ್ಷೆಯಾಗಿತ್ತು. ಅವರು ಹೇಳಿದಂತೆ ಕೇಳುವುದು ಕಷ್ಟವೇನಿರಲಿಲ್ಲ. ನನ್ನ ಕೋಣೆಗೆ ವಾಪಸಾಗುವ ವೇಳೆಗೆ ನಾನೂ ಅವರ ಖ್ಯಾತ ಪುಸ್ತಕ "The Good Companions"ನ ಒಂದು ಪಾತ್ರವಾಗಿದ್ದೇನೆಂಬ ಭಾವನೆ ನನಗುಂಟಾಗಿತ್ತು.

ಅನಂತರ ಗ್ರಹಾಂ ಗ್ರೀನ್ ನನ್ನನ್ನು ಒಂದು ಪಾನಕೂಟಕ್ಕೆ ಮತ್ತೆ ಅಲ್ಬನಿ ಕೋರ್ಟ್‌ಗೇ ಆಹ್ವಾನಿಸಿದರು. ನನ್ನನ್ನು ನೋಡಲು ಅವರಿಗೆ ಬಹಳ ಕುತೂಹಲವಿತ್ತು. ಭೇಟಿಯಾದ ತಕ್ಷಣವೇ ನಾನು ಅಣ್ಣ ನಾರಾಯಣರನ್ನು ಹೋಲುತ್ತೇನೆಯೋ ಎಂದೂ ಕೇಳಿದರು. ಅವರಿಬ್ಬರೂ ತುಂಬಾ ಹತ್ತಿರದ ಸ್ನೇಹಿತರಾಗಿದ್ದರೂ ಒಬ್ಬರನ್ನೊಬ್ಬರು ನೋಡಿರಲಿಲ್ಲ. ಅವರ ಗೆಳೆತನ ಪತ್ರ ವ್ಯವಹಾರದಲ್ಲೇ ಬೆಳೆದು ಬಂದಿತ್ತು. ಅಣ್ಣನ ಬಗ್ಗೆ ಅವರು ಅನೇಕ ಪ್ರಶ್ನೆಗಳನ್ನು ಕೇಳಿದರು. ಅಣ್ಣನ ಹವ್ಯಾಸಗಳು, ಅವರು ಕೆಲಸ ಮಾಡುವ ರೀತಿ, ಮುಂತಾಗಿ. ನಮ್ಮ ಸಂಪಾದ ಕ್ರಮೇಣ ನಾರಾಯಣ ಅವರ "The English Teacher" ಕಾದಂಬರಿಯುತ್ತ

ಸುಳಿದು, ಅಲ್ಲಿಂದ ಜಾತಕ, ಭವಿಷ್ಯ ಹಸ್ತಸಾಮುದ್ರಿಕದತ್ತಲೂ ಹೋಯಿತು. ಈ ವಿಷಯಗಳ ಬಗೆಗೆಲ್ಲಾ ನನಗೆ ತಿಳಿದಷ್ಟು ಮಟ್ಟಿಗೆ ನಾನವರಿಗೆ ಹೇಳಿದೆ. ನಮ್ಮ ಸಂಭಾಷಣೆ ನಡೆಯುತ್ತಿದ್ದಷ್ಟೂ ಹೊತ್ತು ನಾನು ಅವರ ಮುಖ, ಅದರೊಳಗೆ ಅವತರಿಸಿ ಮಾಯವಾಗುತ್ತಿದ್ದ ಪದರಗಳು, ಮಡಿಕೆಗಳು, ಸುಕ್ಕುಗಳು, ಗುಳಿಗಳನ್ನು ಅಭ್ಯಾಸ ಮಾಡುತ್ತಿದ್ದೆ. ಜತೆಗೆ ಅವರ ಭಾವನಾತ್ಮಕ ಪ್ರತಿಕ್ರಿಯೆಗಳನ್ನೂ ನೆನಪಿನನಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದೆ. ಅವರಿಂದ ವಿದಾಯ ಪಡೆಯುತ್ತಿದ್ದಂತೆ, ನಾನು ಎಲಿಯಟ್ಟರನ್ನು ಸಂದರ್ಶಿಸಲು ನಡೆಸಿದ ಯತ್ನದ ಬಗ್ಗೆ ಹೇಳಿದೆ. ನಡೆದುದನ್ನು ಕೇಳಿ ಅವರಿಗೆ ಸ್ವಲ್ಪ ಖೇದವಾಯಿತು. ಅನಂತರ 'ನಾನು ಅವರೊಂದಿಗೆ ಒಂದು ಭೇಟಿ ಏರ್ಪಾಟು ಮಾಡುತ್ತೇನೆ' ಎಂದಷ್ಟೇ ಹೇಳಿ ನಾನು ನಿರ್ಗಮಿಸುತ್ತಿದ್ದಂತೆ ಒಂದು ಫೋನ್ ಮಾಡಿದರು.

ಕೆಲ ದಿನಗಳ ಅನಂತರ ನಾನು ಎಲಿಯಟ್ಟರೊಡನೆ ಅವರ ಫೇಬರ್ ಅಂಡ್ ಫೇಬರ್ ಕಾರ್ಯಾಲಯದಲ್ಲಿ ಕುಳಿತಿದ್ದೆ. ನನಗೆ ಅತೀ ಮುದ್ದಿನಿಂದ ಕೆಟ್ಟ ತುಂಟ ಹುಡುಗ ಹುಂಬತನದಿಂದ ಅಲ್ಲಿಗೆ ನುಗ್ಗಿಬಿಟ್ಟಂತಹ ಭಾವನೆ ಉಂಟಾಯಿತು. ಅವರು ಮಾತನಾಡಿದ್ದೇ ಬಹಳ ಕಡಿಮೆ. ಅದೂ ಕೆಲವು ಸಾಂಪ್ರದಾಯಿಕ ಸ್ವಾಗತ ಶಬ್ದಗಳಿಗೆ ಸೀಮಿತವಾಗಿತ್ತು. ಅನಂತರ ಅವರು ತೈಲಚಿತ್ರಕ್ಕೆ ಪೋಸ್ ಕೊಡುವ ಮಾದರಿಯಲ್ಲಿ ಗಂಭೀರವಾಗಿ ಕುಳಿತುಬಿಟ್ಟರು. ಇದರಿಂದಾಗಿ ಅವರ ಒಂದು ವಿವರವಾದ ಪೆನ್ಸಿಲ್ ಸ್ಕೆಚ್ ಮಾಡಲು ನನಗೆ ಸಾಕಷ್ಟು ಸಮಯ ದೊರೆಯಿತು. ನಾನು ನನ್ನ ಚಿತ್ರಣ ಮುಗಿಸಿ ಅದನ್ನು ಅವರ ಆಟೋಗ್ರಾಫ್‌ಗಾಗಿ ಅವರ ಮುಂದೆ ಹಿಡಿದೆ. ಅವರು ನನ್ನತ್ತ ನೋಡದೆಯೇ ಗಂಭೀರವಾಗಿ ಕುಳಿತಿದ್ದರು. ಅನಂತರ ಅವರು ಗಾಢನಿದ್ರೆಯಲ್ಲಿದ್ದಾರೆಂದು ತಿಳಿದು ನಾನು ಒಮ್ಮೆ ಕೆಮ್ಮಿದೆ. ಅವರು ಧಡಕ್ಕನೆದ್ದು ನನ್ನನ್ನು ವಿಚಿತ್ರ ರೀತಿಯಲ್ಲಿ ನೋಡಿದರು. ಈ ಭೇಟಿಯ ಬಗ್ಗೆ ನನಗೆ ನೆನಪಿರುವ ಮತ್ತೊಂದು ವಿಷಯವನ್ನೂ ನಾನು ಹೇಳಿಬಿಡುತ್ತೇನೆ. ಲಂಡನ್‌ನಲ್ಲಿ ನನಗೆ ಒಬ್ಬ ಸಣ್ಣ ಕವಿಯ ಪರಿಚಯವಿತ್ತು. ಅವನು ತಾನು ಎಲಿಯಟ್ಟರ ಪರಮ ಮಿತ್ರನೆಂದೂ, ಅವರಿಗೆ ತನ್ನ ಕವಿತೆಗಳು ಬಹಳ ಇಷ್ಟವಾಗಿದೆಯೆಂದೂ, ಅಚ್ಚಿನಲ್ಲಿದ್ದ ತನ್ನ ಕವನ ಸಂಗ್ರಹಕ್ಕೆ ಎಲಿಯಟ್ ಮುನ್ನುಡಿ ಬರೆದಿದ್ದಾರೆಂದೂ ಹೇಳಿದ್ದ. ಅವನ ಹೆಸರನ್ನು ನಾನು ಹೇಳಿದಾಗ ಎಲಿಯಟ್ಟರ ಹುಬ್ಬುಗಳು ಆಶ್ಚರ್ಯದಿಂದ ಕಮಾನಾಗಿ ಕೂಡಲೇ ಅಂಥ ವ್ಯಕ್ತಿಯ ಪರಿಚಯವೇ ತಮಗಿಲ್ಲವೆಂದು ಅವರು ಹೇಳಿಬಿಟ್ಟರು. ನಾನು ಎಲಿಯಟ್ಟರನ್ನು ಭೇಟಿಯಾಗಿದ್ದೆನೆಂಬ ಸುದ್ದಿ ತಿಳಿದ ಅನಂತರ ಆ ಕವಿಮಿತ್ರ ಮತ್ತೆ ನನಗೆ ಕಾಣಸಿಗಲೇ ಇಲ್ಲ.

ಒಂದು ಮುಂಜಾನೆ ಬರ್ಟ್ರೆಂಡ್ ರಸಲ್‌ರನ್ನು ಭೇಟಿಯಾಗುವ ಪ್ರಯತ್ನ ಮಾಡ ಬಾರದೇಕೆ ಎಂದು ನನಗನ್ನಿಸಿತು. ಕೂಡಲೇ ಅವರಿಗೂ ಫೋನ್ ಹಚ್ಚಿದೆ. ಅವರು ನನ್ನನ್ನು ಭೇಟಿಯಾಗುವುದಿಲ್ಲವೆಂದಿದ್ದರೂ ನನಗೇನೂ ದುಃಖವಾಗುತ್ತಿರಲಿಲ್ಲ. ನನ್ನ ಲಂಡನ್ ಸಾಧನೆಯ ಬಗ್ಗೆ ನನಗೆ ಅಷ್ಟು ಹೊತ್ತಿಗೆ ಸಾಕಷ್ಟು ಸಮಾಧಾನವೂ ಆಗಿತ್ತು. ನಾನು ಫೋನ್ ಮಾಡುತ್ತಿದ್ದಂತೆ ಆ ಬದಿಯಲ್ಲಿ ಯಾರೋ ರಿಸೀವರ್ ಎತ್ತಿದರು. ನಾನು ನನ್ನ ಪ್ರವರ ಪ್ರಾರಂಭಿಸಿದೆ– "ಹಲೋ... ನಾನು ಭಾರತದಿಂದ ಬಂದಿರೋ ವ್ಯಂಗ್ಯಚಿತ್ರಗಾರ. ಸರ್...ಅರ್ಲ್...ಮಿಸ್ಟರ್... ಬರ್ಟ್ರೆಂಡ್ ರಸಲ್ ರನ್ನು ಕಾಣಬೇಕಿತ್ತು... ಅವರ ಚಿತ್ರ ಬರೆಯುವಾಂತ..." ಅತ್ತಲಿನ ದನಿ – "ಬರ್ಟ್ರೆಂಡ್ ರಸಲ್ ಸ್ಪೀಕಿಂಗ್... ಯಾವಾಗ ಬರ್ತೀರಿ ?" ಎಂದಾಗ, ಮಿಕ್ಕ ಖ್ಯಾತನಾಮರನ್ನು ಬೆನ್ನಟ್ಟಿದ್ದ ನನ್ನ ಅನುಭವದ ಫಲವಾಗಿ ನನಗೆ ಆಘಾತವೇ ಆಗಿತ್ತು. ನಾನು ಎಡವಿ ಬಿದ್ದೆ ! ಅವರು ತಮ್ಮ ಮಾತು ಮುಂದುವರೆಸಿದರು : "ನಿಮಗೆ ಈ ಕೂಡಲೇ ಬರಲು ಸಾಧ್ಯವೇ ? ಸರಿ ಒಳ್ಳೇದು ! ಎಲ್ಲಿಂದ ಮಾತಾಡ್ತಾ ಇದ್ದೀರಿ ? ಪಿಕಾಡಲಿಯ ಆಲ್ಬೆಮರ್ಲ್ ಬೀದಿಯಿಂದ್ಲೇ ? ಈಗ ಗ್ರೀನ್ ಪಾರ್ಕ್‌ಗೆ ಒಂದು ಟ್ಯೂಬ್ ರೈಲ್ ಹತ್ತಿ... ಅರ್ಲ್‌ಕೋರ್ಟ್ ಸ್ಟೇಷನ್‌ನಲ್ಲಿ ಇಳಿದು ಗ್ರೀನ್ ಲೈನ್ ದಾಟಿ ರಿಚ್‌ಮಂಡ್‌ಗೆ ಹೋಗೋ ರೈಲನ್ನ ಹತ್ತಿ. ವಿಂಬಲ್ಡನ್ ಅಥವಾ ಹೌನ್ಸ್‌ಲೋ ಸ್ಟ್ರೀಟ್ ರೈಲು ಹತ್ತದಂತೆ ಜಾಗ್ರತೆ ವಹಿಸಿ. ರಿಚ್‌ಮಂಡ್‌ಗೆ ಬಂದಿಳಿದು ಯಾವುದೇ ಟ್ಯಾಕ್ಸಿ ಡ್ರೈವರನ್ನು ಕೇಳಿದರೂ ಅವ ನಿಮ್ಮನ್ನ ನನ್ನ ಮನೆ ಮುಂದೆ ಇಳಿಸ್ತಾನೆ..."

❧

ನಾನು ಹೋಗುವ ವೇಳೆಗೆ ರಸಲ್ ತಮ್ಮ ಸುಂದರವಾದ ಬಂಗಲೆಯ ಬಾಗಿಲಲ್ಲೇ ನನಗಾಗಿ ಕಾಯುತ್ತಾ ಅಗಲವಾದ ನಗುವಿನ ನಡುವೆ ಪೈಪ್ ಸಿಕ್ಕಿಸಿ ನಿಂತಿದ್ದರು. ಅವರ ಕೋಣೆಯಲ್ಲಿ ಕುಳಿತಾಗಿನಿಂದಲೂ ನನಗೆ ತಡೆರಹಿತ ಮನರಂಜನೆ ದೊರೆಯಿತು. ಅವರಲ್ಲಿ ಒಳ್ಳೆಯ ಹಾಸ್ಯ ಪ್ರಜ್ಞೆ, ನೆನಪಿನಂಗಳದ ಸ್ವಾರಸ್ಯಕರ ಘಟನೆಗಳು, ವಿಚಾರಕಿರಣಗಳನ್ನು ನಾನು ಕಂಡೆ. ನಾವು ಅಹಿಂಸಾವಾದ, ಗಾಂಧಿ, ನೆಹರು, ಅಣು ಬಾಂಬು, ಶಾಂತಿ, ಯುದ್ಧ ಹೀಗೆ ಮನಸ್ಸಿಗೆ ಬಂದ ವಿಷಯಗಳ ಬಗ್ಗೆಲ್ಲಾ ಚರ್ಚಿಸಿದೆವು. Principa Mathematicaದ ಭಕ್ತನೇನೂ ಅಲ್ಲದ ನನ್ನಂತಹವನನ್ನೂ ಆ ಮಹಾನ್ ಗಣಿತಜ್ಞ ಹಾಗೂ ತತ್ವಜ್ಞಾನಿ ಬಹಳ ಸರಳವಾಗಿ ಮಾತನಾಡಿಸಿ, ಅವರ ಗಾಢ ಚಿಂತನೆಗಳ ಹಿರಿಮೆಯಡಿಯಲ್ಲೂ ನನ್ನನ್ನು ಕುಬ್ಜನಾಗಿಸದಂತೆ ನೋಡಿಕೊಂಡರು ! "ಸಣ್ಣ ಕಥಾ ಮಾಧ್ಯಮ ಒಂದು ವಿಚಾರವನ್ನು ಮನಮುಟ್ಟುವಂತೆ ಮಾಡಲು ಅತ್ಯಂತ ಸೂಕ್ತವಾದದ್ದೆಂದು ಈಚೆಗೆ ನನಗೆ ತಿಳಿಯಿತು ಗೊತ್ತಾ ?...." ಎಂದು ಸೋದಾಹರಣವಾಗಿ ಅನೇಕ ಕಥೆಗಳನ್ನು ಹೇಳಿ

ದರು ನಾನು ಇನ್ನೇನು ಹೊರಡಲು ತಯಾರಾದೆ ಎನ್ನುವಾಗ ಆದೂ ಇಂಥ ಅದ್ಭುತ ಭೇಟಿಯು ಲಹರಿಯನ್ನು ಮೆಲುಕು ಹಾಕಿಕೊಳ್ಳುತ್ತಿರುವಾಗಲೇ ಇದ್ದಕ್ಕಿದ್ದಂತೆ ಅವರು ಹೇಳಿದರು : "... ಆದರೆ ನೀವು ಭಾರತೀಯರು ಪ್ರಪಂಚಕ್ಕೆ ಕೊಟ್ಟಿರುವ ಕೊಡುಗೆ ಶೂನ್ಯ. ಸಂಪೂರ್ಣ ಶೂನ್ಯ." ಇದನ್ನು ಕೇಳುತ್ತಿದ್ದಂತೆ ನನ್ನ ಮುಖ ಕೆಂಪೇರಿತು. ಈ ಅನಿರೀಕ್ಷಿತ ಧಾಳಿಗೆ ಹೇಗೆ ಪ್ರತಿಕ್ರಿಯಿಸಬೇಕೋ ನನಗೆ ತಿಳಿಯಲಿಲ್ಲ ಆ ಕ್ಷಣದಲ್ಲಿ ಇಂಥ ಅವಮಾನಕರವಾದ ಮಾತನ್ನು ಎದುರಿಸುವ ಒಂದು ಮಹತ್ಸಾಧನೆಯಾದರೂ ನನ್ನ ನೆನಪಿಗೆ ಬರಲಿಲ್ಲ. ಏನೂ ತಿಳಿಯದ ಗೊಂದಲದಲ್ಲಿ ಒದ್ದಾಡುತ್ತಿರುವಾಗಲೇ ಅವರು ಮತ್ತೊಮ್ಮೆ ಹೇಳಿದರು– "ನಾನು ಹೇಳ್ತಿರೋದು ನಿಜ. ನಿಮ್ಮ ಕೊಡುಗೆ ಸಂಪೂರ್ಣ ಶೂನ್ಯ ಹುಚ್ಚು ಹಿಡಿದವರಂತೆ ಅವರು ಅದನ್ನೇ ಪುನರುಚ್ಚರಿಸುತ್ತಾ ಹೋದರು. ನಾನು ಬೇಸರ ಹಾಗೂ ಕೋಪಗಳಿಂದ ಕಡೆಗೆ ಬಾಯಿಬಿಟ್ಟೆ–"ಹಾಗೇನೂ ಇಲ್ಲ ಮಿಸ್ಟರ್...ಅರ್ಲ್...ರಸಲ್ ಸರ್, ನಿಮ್ಮ ಗ್ರಹಿಕೆ ತಪ್ಪು. ಚದುರಂಗದಾಟವನ್ನ ನಾವೇ..." ಹೊಳಪಿನ ಕಂಗಳಿಂದ ತುಂಟಾಟ ಹೊರಸೂಸುತ್ತಲೇ ಅವರು ಹೇಳಿದರು. "ಶೂನ್ಯ... ಭಾರತೀಯರೇ ಅದರ ಜನಕರು. ನಾನು ಶೂನ್ಯದ ಪರಿಕಲ್ಪನೆಯ ವಿಷಯ ಹೇಳ್ತಾ ಇದ್ದೀನಿ. ಸೊನ್ನೆ ಎಂಬ ಗಣಿತದದ್ಭುತವನ್ನು ಕಂಡು ಹಿಡಿದವರೇ ಭಾರತೀಯರಲ್ಲವೇ ? ಭಾರತೀಯ ತತ್ವಗಳ ದೊಡ್ಡ ಅಭಿಮಾನಿ ನಾನು". ಗೆಲುವಿನ ಭಾವನೆಯೊಂದಿಗೆ ಮುಗುಳ್ನಗುತ್ತಾ ನನ್ನನ್ನೊಂದು ಕ್ಷಣ ಗೊಂದಲಕ್ಕೀಡು ಮಾಡಿದ್ದಕ್ಕೆ ಒಳಗೊಳಗೇ ಖುಷಿ ಪಡುತ್ತಾ ತಮ್ಮ ಕೆದರಿದ ಬಿಳಿಗೂದಲ ಮೇಲೆ ಕೈಯಾಡಿಸುತ್ತಾ ನಕ್ಕರು. ಆ ದಿನದ ಅನಂತರ ಇಷ್ಟು ಒಳ್ಳೆಯ ಮಹಾನ್ ವ್ಯಕ್ತಿಯನ್ನು ನಾನಿನ್ನೂ ಭೇಟಿಯಾಗಿಲ್ಲ.



"ಸಬ್ಬಾಜ್ಜಿ ಏಳಿದ್ರೇನೇ ನಾನು ಓಡೋದು. ಡಿಂಪಲ್ ಮಾತ್ನೆಲ್ಲಾ ಕೇಳ್ತೀರಾ"

ಹನುಮಪ್ಪನ ಹೇಳಿಕೆಗಳು :
ಹನುಮಪ್ಪ ಕಂಡದ್ದು

ಸಂಗ್ರಾಹಕ : ರಾಮಪ್ಪ

ಸ್ವಾಮಿ, ಈಚ್ಗನ್ಕ ಯೆಲ್ಲೆಲ್ಲೂ
ನಾಯ್ಗೋಳ್ ಬಗಳಾಟ ಕಚ್ಚಾಟ
ಜಾಸ್ತಿಯಾಗೋಗೈತೆ.
ಮಹಾತ್ಮ ಗಾಂಧಿ ರಸ್ತೆ ಬಾರ್ ಮುಂದೂ
ನಿಂತಿರ್ತಾವೆ ಈ ನಾಯ್ಗೊಳು.
ಈ ನಾಯ್ಗೋಳ್ಗೆ ಹುಚ್ಚು ಯಿಡಿದೈತೋ
ಬೆದೆ ಹತ್ತೈತೋ ಗೊತ್ತಾಗ್ವಲ್ದು.
ಅವಕ್ಕೆ ಎಂಜ್ಲೇನೂ ಈಗಿಲ್ಲ.
ನಾವಣ್ಣಾಮ್ದೋರ್ನ ನಾಯ್ಗಳಂಗೆ ಕಚ್ಕಾಡ್ತೀರಲ್ಲೋ
ಅಂತಿದ್ರು ನಮ್ಮಪ್ಪ
ಗಾಂದಿ ತಾತಾ ಬದಕಿದ್ರೆ
ಹಂಗೇಳ್ತಾ ಇದ್ನೇನೋ ನಮ್ಗ.
ಈಗ ಕಲ್ಲು ವಿಗ್ಗರ ಆಗಿ ನಿಂತವ್ನೆ
ಬಾಯಿದ್ರೂ ಬಿಡ್ಲಾರ ಬಾಯ್ನ.
ಹ್ವಾದ ವರ್ಸ ಹಾಕಿದ್ದ ಊವ್ನಾರ
ಬಾಡೋಗೈತೆ ಅಂತ
ಇವತ್ತು ಅದ್ನ ತೆಗ್ದಿ
ಬೇರೆ ಆರ ಆಕದ್ರೆ,
ಐದು ರುಪಾಯ್ನ ಆರಕ್ಕೆ
ಆತ್ರುಪಾಯಿ ಅಂತ ಕರ್ಚಾಕಿ
ಇನ್ನೈದು ಜೇಬ್ಗಿಳಿಬಿಟ್ಟವ್ರೆ,
ಒಂದ್ನಾಯ್ ಬಂದಿ
ಗಾಂದಿ ತಾತನ ಜಗಲೀಗೆ
ಉರಕಿಬಿಟ್ಟೋಡೈತೆ !

ಸಮಕಾಲೀನ ಗಣಿತ !

— ಆನಂದ್

ನಾನು ಸ್ಕೂಲಿಗೆ ಹೋಗ್ತಿದ್ದಾಗ ಒಬ್ಬರು ಗಣಿತದ ಮೇಷ್ಟ್ರು ಇದ್ರು. ಬಹಳ ಕಠಿನವಾದ ಲೆಕ್ಕಗಳನ್ನು ಕೊಟ್ಟು ನಂ ಪ್ರಾಣ ತೆಗೀತಾ ಇದ್ರು. ಈಗಲೂ ನೆನಪಿಸಿ ಕೊಂಡರೆ ಮೈ ಜುಂ ಅನ್ನುತ್ತೆ. ಈಗ ನಂ ಗಣಿತದ ರೀತೀನೇ ಬೇರೆ ಅನ್ನಿ, ಅದು ಬೇರೆ ಕಥೆ ! ಮೊನ್ನೆ ನಂ ಹಳೇ ಗಣಿತದ ಮೇಷ್ಟ್ರು ಸಿಕ್ಕಿದರು ಮಾರ್ಕೆಟ್ ಹತ್ತಿರ ! ಅದೇ ಗಂಭೀರ ಮುಖ, ಭಯ ಆಗೋ ತರಹ ! ನಮಸ್ಕಾರ ಸಾರ್ ಅಂದೆ. ಅದೂ ಇದೂ ಮಾತಾಡ್ತಾನಡೆದೆವು. ನೋಡೀ ಸಾರ್ ಈಗ ಕಾಲ ಬದಲಾಯಿಸಿದೆ, ನೀವು ಆಗ ಕೊಡ್ತಾ ಇದ್ದ ಲೆಕ್ಕಗಳನ್ನ ಈಗಿನ ಹುಡುಗರು ಅರ್ಥ ಮಾಡ್ಕೋತಾರೋ ಇಲ್ಲವೋ ? ಅದಕ್ಕೆ ಈಗಿನ ಕಾಲದಲ್ಲಿ ಹೇಗೆ ಲೆಕ್ಕ ಕೊಡಬೇಕು ಅಂತ ಹೇಳ್ತೀನಿ ಅಂದೆ. ಹೇಳು, ಆಗಂತೂ ನಿಂತಲೇಗೆ ಗಣಿತ ಹತ್ತಲಿಲ್ಲ, ಈಗ ನೋಡೋಣ ಅಂದ್ರು ಮೇಷ್ಟ್ರು ! ಶುರು ಮಾಡಿದೆ.

ಒಂದು : ಒಬ್ಬ ಬಿ.ಡಿ.ಎ. ಅಧಿಕಾರಿ ಬೆಂಗಳೂರಿನಲ್ಲಿ, ಆರು ತಿಂಗಳಲ್ಲಿ ಮೂವತ್ತು ಸೈಟಿನಲ್ಲಿ ಎಂಬತ್ತು ಸಾವಿರ ಗಳಿಸಿದರೆ, ಮೈಸೂರಿನಲ್ಲಿ ಎಷ್ಟು ಗಳಿಸಬಹುದು ?

ಎರಡು : ಆರ್. ಟಿ. ಓ. ಆಫೀಸಿನಲ್ಲಿ ಒಂದು ದಿನದ ಮೇಲ್ಸಂಪಾದನೆ ಮೂರು ಸಾವಿರ ರೂಪಾಯಿ, ನೂರು ಜನರಿಂದ ಆದರೆ ಇಪ್ಪತ್ತು ಜನ ಸರಕಾರೀ ಅಧಿಕಾರಿಗಳು ಒಟ್ಟು ಎಷ್ಟು ಗಳಿಸುತ್ತಾರೆ ? (ಸೂ : ಇಬ್ಬರು ಅಧಿಕಾರಿಗಳು ಸಸ್ಪೆಂಡ್ ಆಗಿದ್ದಾರೆ ಎಂದು ನೆನಪಿನಲ್ಲಿರಲಿ !)


ಮೂರು : ಒಬ್ಬ ಗಣ್ಯ ವ್ಯಾಪಾರಿ, ಹನ್ನೆರಡು ತಿಂಗಳಲ್ಲಿ ವರಮಾನ ತೆರಿಗೆಯವರಿಗೆ ಒಂದು ಲಕ್ಷ ರೂಪಾಯಿ ಮೋಸ ಮಾಡಿದರೆ, ಅವನ ನಿಜ ವಾದ ತೆರಿಗೆ ಎಷ್ಟು ? (ವ್ಯಾಪಾರಿಗೆ ಮೂರು ಮನೆ, ಎರಡು ಕಾರು ಇವೆ!)

ನಾಲ್ಕು : ಚುನಾವಣೆ ಖರ್ಚಿಗಾಗಿ ದೆಹಲಿಯಿಂದ ಹದಿನಾರು ಪೆಟ್ಟಿಗೆ ಗಳಲ್ಲಿ ನಲವತ್ತು ಲಕ್ಷ ಬಂದರೆ, ಒಂದೊಂದು ಪೆಟ್ಟಿಗೆಯಲ್ಲಿ ಎಷ್ಟಿರುತ್ತೆ ? (ಎಲ್ಲ ಪೆಟ್ಟಿಗೆಗಳೂ ಒಂದೇ ಸೈಜಿಲ್ಲ ! !)

ಐದು : ಒಂದು ಕೋಟಿ ರೂಪಾಯಿಯ ಸರ್ಕಾರೀ ಭವನ ಕಟ್ಟುವಾಗ, ಕಂಟ್ರಾಕ್ಟರ್ ತನ್ನ ಉಪಯೋಗಕ್ಕಾಗಿ ಎಷ್ಟು ಮನೆ ಕಟ್ಟಬಹುದು ?

ಮೇಷ್ಟ್ರಿಗೆ ರೇಗಿತು. ನಿಲ್ಸೋ ನಿನ್ನ ಕತೆ, ಹೀಗೆಲ್ಲ ಲೆಕ್ಕ ಕೊಡ್ತಾ ಹೋದ್ರೆ ಹುಡುಗರಿಗೆ ಕೆಟ್ಟ ಬುದ್ಧಿ ಬರೊದಿಲ್ವೆ ? ನಾಳೆ ಅವರು ಒಳ್ಳೇ ಪ್ರಜೆಗಳಾಗೋದು ಹೇಗೆ ? ಅಂತ ಕೂಗಿದರು. ನಾನು ಶಾಂತನಾಗಿ ಹೇಳಿದೆ : ಅಲ್ಲ ಸಾರ್, ಇವೆಲ್ಲ ಕಠೋರ ಸತ್ಯಗಳನ್ನು ಅವೇ ನಿಧಾನವಾಗಿ ಅನುಭವಿಸಿ ಕಲಿಯೋದಕ್ಕಿಂತ, ನಾವೇ ಸ್ಕೂಲಿಂದ ಹೇಳಿಕೊಟ್ಟರೆ ಸರಿಯಲ್ವೇ ? ಆಗ್ಲೇ ತಾನೇ ನಂ ಮಕ್ಕಳು ಧೈರ್ಯವಾಗಿ ಸಮಾಜದಲ್ಲಿ ಬಾಳುಕ್ಕೆ ಸಾಧ್ಯ ?

ಅಷ್ಟು ಹೊತ್ತಿಗೆ ಮೇಷ್ಟರ ಮಗ ಬಂದ. 'ಬಾಪ್ಪಾ ಮನೆಗೆ ಹೋಗೋಣ', ಅಂದ. ನಾಳೆ ಬಿ. ಡಿ. ಎ.ಗೆ ಹೋಗ್ಬೇಕು, ಅರವತ್ತು ನಲವತ್ತು ಸೈಟಿಗೆ ಎಷ್ಟು ಕೊಡಬೇಕೋ ಬೋಫಾರ್ಸ್ ಬಾಬ್ತು ಅಂತ ಗೊಣಗಿದ. ಮೇಷ್ಟರ ಮುಖ ನೋಡಿದೆ ! ಅವರ ವದನಾರವಿಂದ ಜ್ಞಾನೋದಯ ಆದ ಬುದ್ಧನಂತೆ ಕಂಗೊಳಿಸು ತ್ತಿತ್ತು ! !



"ಮನೇಲೂ ನನ್ನ ನಾಯಕತ್ವ ಹೋಗೋ ಹಾಗಿದೆ. ಮಕ್ಕಳಿಬ್ರೂ ಭಿನ್ನಮತೀಯರಾಗಿದ್ದಾರೆ"

ಮೊಲದ ಬೇಟೆ

(ಮೂಲ : ಕಾಸ್ಟ ನೇಡಾ; ಕನ್ನಡಕ್ಕೆ : ಶಿವು)

"ಸಂಜೆಗೆ ಮುಂಚೆ ಒಂದು ಮೊಲವನ್ನು ಹೊಂಚಿ, ಹಿಡಿದು, ಕೊಂದು, ಚರ್ಮ ಸುಲಿದು ಮಾಂಸವನ್ನು ಸುಟ್ಟು ಸಿದ್ಧಗೊಳಿಸು. ತಡಮಾಡಬೇಡ." ಡಾನ್ ಜುವಾನ್ ಆಜ್ಞಾಪಿಸಿದ.

ಮೊಲದ ಬೇಟೆ ನನಗೆ ಹೊಸದೇನಲ್ಲ. ಮೆಕ್ಸಿಕೋದಲ್ಲಿನ ಆ ಮರುಭೂಮಿಯಲ್ಲಿ ನಾನು ಓಡಾಡಲು ಪ್ರಾರಂಭಿಸಿದಾಗಿನಿಂದ, ಅಲ್ಲಿನ ಪೊದೆಗಳಲ್ಲಿ ದೊರಕುವ ಕಡ್ಡಿ ಕಟ್ಟಿಗೆಗಳಿಂದ ಬೋನು ನಿರ್ಮಿಸಿ ಮೊಲ ಹಿಡಿಯುವುದನ್ನು ಡಾನ್ ನನಗೆ ಬಹು ಮುತುವರ್ಜಿಯಿಂದ ಕಲಿಸಿದ್ದ. ಆ ಮುಸ್ಸಂಜೆ ನಾನು ನಿರ್ಮಿಸಿದ ಬೋನಿನಲ್ಲಿ ಮೊಲವೊಂದು ಸುಲಭವಾಗಿ ಸಿಕ್ಕಿ ಬಿತ್ತು.

"ಈಗ ಅದನ್ನು ಕೊಲ್ಲು". ಡಾನ್ ವ್ಯಾವಹಾರಿಕ ದನಿಯಲ್ಲಿ ನುಡಿದ.

ಮೊಲವನ್ನು ಹಿಡಿದು ಹೊರತೆಗೆಯಲು ನಾನು ಬೋನಿನೊಳಗೆ ಕೈ ಚಾಚಿದೆ. ಅದರ ಕಿವಿಗಳನ್ನು ಹಿಡಿದು ಎಳೆಯತೊಡಗಿದಾಗ, ಹಠಾತ್ತನೆ ಯಾವುದೋ ಅವ್ಯಕ್ತ ಅತೀವ ಭಯ ನನ್ನನ್ನು ಆಕ್ರಮಿಸಿತು. ಡಾನ್ ನನಗೆ ಮೊಲ ಹಿಡಿಯುವುದನ್ನು ಕಲಿಸಿದ್ದನೇ ವಿನಹ ಕೊಲ್ಲುವುದನ್ನು ಕಲಿಸಿರಲಿಲ್ಲ.

ಮೊಲವನ್ನು ಬೋನಿನಲ್ಲಿಯೇ ಬಿಟ್ಟು ನಾನು ಡಾನ್ ಕಡೆ ತಿರುಗಿದೆ,

"ನಾನು ಮೊಲವನ್ನು ಕೊಲ್ಲಲಾರೆ."

"ಏಕೆ ?"

" ನಾನೆಂದೂ ಮೊಲವನ್ನು ಕೊಂದಿಲ್ಲ"

"ಈ ಹಿಂದೆ ಅನೇಕ ಪಕ್ಷಿ ಪ್ರಾಣಿಗಳನ್ನು ಬೇಟೆಯಾಡಿ ಕೊಂದಿಲ್ಲವೇನು ?"

"ಬಂದೂಕಿನಿಂದ ಸುಟ್ಟಿರುವುದು ನಿಜ. ಆದರೆ ಬರಿಗೈಗಳಿಂದ......"

"ಕೊಲ್ಲುವ ರೀತಿ ಹೇಗಾದರೇನು ? ಆ ಮೊಲದ ಕಾಲವಂತೂ ಸನ್ನಿಹಿತವಾಗಿದೆ."

ಮೊಲದ ಆಯುಸ್ಸು ಮುಗಿದಿರುವ ಬಗ್ಗೆ ಡಾನ್‌ಗೆ ಎಳ್ಳಷ್ಟೂ ಸಂಶಯ ವಿದ್ದಂತೆ ತೋರಲಿಲ್ಲ.

"ಕೊಲ್ಲು ! !" ಡಾನ್ ಮತ್ತೊಮ್ಮೆ ತೀಕ್ಷ್ಣ ಧ್ವನಿಯಿಂದ ಕೂಗಿದ.

"ಇಲ್ಲ, ನಾನು ಕೊಲ್ಲಲಾರೆ."


"ಮೊಲ ಈಗ ಸಾಯಲೇಬೇಕು. ಈ ಸುಂದರ ಭೂಮಿಯಲ್ಲಿ ತಿರುಗಾಡುವ ಸೌಭಾಗ್ಯ ಆ ಮೊಲದ ಪಾಲಿಗೆ ಇನ್ನಿಲ್ಲ. ಅದರ ವಿಧಿಯನ್ನು ನೀನು ತಪ್ಪಿಸಲು ಯತ್ನಿಸುವುದು ಮೂರ್ಖತನ. ಬೇಗ ಮಾಡಬೇಕಾದ್ದನ್ನು ಮಾಡಿ ಮುಗಿಸು." ಸಹನೆ ಮೀರಿದ ದನಿಯಲ್ಲಿ ಡಾನ್ ನುಡಿದ.

ತರಂಗ ತರಂಗವಾಗಿ ಮೂಡುತ್ತಿದ್ದ ನನ್ನ ಭಾವನೆಗಳು ನನಗೇ ಗಲಿಬಿಲಿ ಯನ್ನುಂಟುಮಾಡಿದ್ದವು ಬೋನಿನಲ್ಲಿ ಸಿಕ್ಕಿ ಬಿದ್ದಿದ್ದ ಮೊಲದ ದಾರುಣ ಸ್ಥಿತಿ ನನ್ನ ಬಾಳಿನ ಅನೇಕ ಹಂತಗಳಲ್ಲಿ ನಾನು ಸಿಲುಕಿದ್ದ ಅಂತಹದೇ ಅನೇಕ ಪ್ರಸಂಗ ಗಳನ್ನು ನಿಚ್ಚಳವಾಗಿ ನೆನಪಿಗೆ ತಂದಿತು. ನಾನು ಮೊಲವನ್ನು ನೋಡಿದೆ. ಬೋನಿನ ಹಿಂಭಾಗಕ್ಕೆ ಭಯದಿಂದ ಹಿಂದೆ ಸರಿದಿದ್ದ ಮೊಲ ಬಿರುಗಣ್ಣುಗಳಿಂದ ನನ್ನನ್ನೇ ನೋಡುತ್ತಿತ್ತು. ಆ ನೋಟದಲ್ಲಿನ ಮೂಕ ಹತಾಶೆ ನನ್ನ ಮನಸ್ಸಿನಲ್ಲಿದ್ದ ಭಾವನೆಗಳನ್ನೇ ಪ್ರತಿಬಿಂಬಿಸುವಂತಿತ್ತು. "ಏನಾದರೂ ಸರಿ, ನಾನಂತೂ ಇದನ್ನು ಕೊಲ್ಲುವುದಿಲ್ಲ. ಈ ಮೊಲ ಈ ಕ್ಷಣವೇ ಸ್ವತಂತ್ರವಾಗಿ ಹೋಗುತ್ತದೆ." ನಾನು ಆವೇಶದಿಂದ ಕೂಗುತ್ತಾ ಮೊಲವನ್ನು ಬಿಡುಗಡೆ ಮಾಡಲು ಬೋನಿನೊಳಗೆ ಕೈ ಚಾಚಿ ಅದನ್ನು ಹಿಡಿಯಲು ನೋಡಿದೆ. ಅದು ನನ್ನ ಕೈಯಿಂದ ತಪ್ಪಿಸಿಕೊಂಡು ಇನ್ನೊಂದು ಮೂಲೆಗೆ ಸರಿಯಿತು. ಮತ್ತೆ ಯತ್ನಿಸಿದರೂ ಅದು ನನ್ನ ಕೈಗೆ ಸಿಗಲಿಲ್ಲ, ನನ್ನ ಹತಾಶ ಭಾವನೆ ಇನ್ನಷ್ಟು ಉಗ್ರವಾಯಿತು. ಹೇಗಾದರೂ ಮಾಡಿ ಈ ಮೊಲವನ್ನು ಬಿಡುಗಡೆ ಮಾಡಲೇ ಬೇಕೆಂಬ ಛಲದಿಂದ ನಾನು ಆ ಬೋನನ್ನು ಜೋರಾಗಿ ಒದ್ದೆ. ಕಟ್ಟಿಗೆಗಳ ಆ ಬೋನು ನನ್ನ ಒದೆತಕ್ಕೆ ಮುರಿದು ಬಿತ್ತು. ಗೆದ್ದ ಉತ್ಸಾಹದಿಂದ ನಾನು ಆ ಮೊಲವನ್ನು ಕಿವಿಗಳಿಂದ ಹಿಡಿದು ಮೇಲೆತ್ತಿದೆ. ಮರು ಕ್ಷಣವೇ ನನ್ನ ಉತ್ಸಾಹವೆಲ್ಲಾ ನುಚ್ಚುನೂರಾಯಿತು. ಸತ್ತ ಮೊಲ ನನ್ನ ಕೈಲಿತ್ತು.

ಏನೂ ತೋಚದೆ ನಾನು ಸುಮ್ಮನೆ ಕುಳಿತೆ. ಮಗುವಿಗೆ ತಿಳಿಯ ಹೇಳು ವಂತೆ ಡಾನ್ ನಿಧಾನವಾಗಿ ಹೇಳಿದ.

"ನಿನ್ನ ಬೋನು ಆ ಮೊಲದ ಬಾಳಿನ ಕೊನೆಯ ಸೆಣಸಾಟದ ತಾಣ. ಈ ಸುಂದರ ಮರುಭೂಮಿಯಲ್ಲಿ ತಿರುಗಾಡುವ ಸೌಭಾಗ್ಯ ಆ ಮೊಲಕ್ಕೆ ಇಂದಿಗೆ ಮುಗಿದಿತ್ತು ಎಂದು ನಾನಾಗಲೇ ನಿನಗೆ ಹೇಳಿದ್ದೆನಲ್ಲವ ?"

—o—



ಶುಭಾಶಯಗಳೊಂದಿಗೆ

ಸ್ಟ್ರೈಸ್ ಕ್ರೀಟ್

ಪೀಣ್ಯ ಮೂರನೆಯ ಹಂತ, ಪೀಣ್ಯ
ಬೆಂಗಳೂರು-560058

ದೂರವಾಣಿ : 608186
609026

ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ಎಂಡ್ ಫೋಟೋ ಟೈಪ್ ಸೆಟರ್ಸ್

3/3, 1ನೇ ಮುಖ್ಯ ರಸ್ತೆ, ಹೊಸ ತರಗುಪೇಟೆ,
ಬೆಂಗಳೂರು 560002

Statement about ownership and other particulars about newspaper "APARANJI" to be published in the first issue every year after the last day of February.

FORM IV
(See Rule 8)

1	Place of Publication	....	Bangalore
2	Periodicity	....	Monthly
3	Printer's Name	....	V R Nath
	Nationality	....	Indian
	Address	....	404, Sampige Road Malleswaram Bangalore-560 003
4	Publisher's Name	....	M Shivakumar
	Nationality	....	Indian
	Address	....	Aparanji Karyalaya 36, 6th Main Road Malleswaram Bangalore-560 003
5	Editor's Name	....	M Shivakumar
	Nationality	....	Indian
	Address	....	Aparanji Karyalaya 36, 6th Main Road Malleswaram Bangalore-560 003
6	Name and address of individuals who own the newspaper and partners or share holders holding more than one per cent of the total capital	....	M Shivakumar Sole Proprietor Aparanji Karyalaya 36, 6th Main, Malleswaram Bangalore-560 003

I, M. Shivakumar, hereby declare that the particulars given above are true to the best of my knowledge and belief.

23rd February 1989

M. SHIVAKUMAR
Publisher

REGISTERED No. BGW-180

Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram. Bangalore-560 003. Editor : M. SHIVA KUMAR.